ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಾವಳಿ

# ತತ್ತ್ವಸಮಾಸ

(ವಿವರಣೆಯಿಂದೊಡಗೂಡಿದ ಕಪಿಲಸೂತ್ರಗಳು)

ಅನುವಾದಕರು :

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

(ತಮ್ಮ ಪೂರ್ವಾಶ್ರಮದಲ್ಲಿ)

ಕ್ರಮಾಂಕ ೪೦

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ.

1964

# ಪ್ರಕಾಶಕರ ಮುನ್ನುಡಿ

ಈ ಗ್ರಂಥವು ಅಚ್ಚಾಗಿ ಮೂವತ್ತೆರಡು ವರ್ಷಗಳಾದವು. ಪ್ರತಿಗಳೆಲ್ಲ ಮುಗಿದುಹೋದದ್ದರಿಂದ ಈಗ ಗ್ರಂಥವನ್ನು ತಿದ್ದಿಸಿ ಮತ್ತೆ ಅಚ್ಚುಮಾಡಿಸಲಾಗಿದೆ.

ಗ್ರಂಥದ ಪ್ರತಿಯೊಂದು ಸೂತ್ರದ ವಿವರಣೆಯಲ್ಲಿಯೂ ಯಾವದಾದರೊಂದು ಮಾರ್ಪಾಡು ಆಗಿಯೇ ಇದೆ. ಗ್ರಂಥಖಂಡಗಳನ್ನು ಒಡೆದು ಜೋಡಿಸುವದರಲ್ಲಿ ಕೆಲವು ಮಾರ್ಪಾಡುಗಳಾಗಿವೆ. ಮುಖ್ಯವಾದ ವಿಷಯಗಳು ಎದ್ದು ತೋರುವಂತೆ ಅಚ್ಚಿನ ಮೊಳೆಗಳನ್ನು ಬೇರ್ಪಡಿಸಿಕೊಂಡಿದೆ.

ಸಾಂಖ್ಯಶಾಸ್ತ್ರದ ತಿಳಿವಳಿಕೆಯೂ ಸಾಂಖ್ಯಕ್ಕೂ ವೇದಾಂತಕ್ಕೂ ಇರುವ ವೈಲಕ್ಷಣ್ಯವೇನೆಂಬುದರ ಜ್ಞಾನವೂ ಅಧ್ಯಾತ್ಮವಿದ್ಯಾಭ್ಯಾಸಿಗೇಗೆ ಅತ್ಯವಶ್ಯವಾಗಿರುವವೆಂಬುದು ಶ್ರೀಶ್ರೀಗಳ ಮತ. ಆದ್ದರಿಂದ **ಸಾಂಖ್ಯಕಾರಿಕೆ**ಯನ್ನು ಹೀಗೆಯೇ ವಿವರಣಸಮೇತವಾಗಿ ಪ್ರಕಟಿಸಬೇಕೆಂದು ಅವರು ಸೂಚಿಸಿರುತ್ತಾರೆ. ಶ್ರೀಗಳಿಗೆ ಬಿಡುವು ಸಿಕ್ಕಿದರೆ 'ಭಗವದ್ಗೀತಾಸಾರಸರ್ವಸ್ವ'ವನ್ನು ಅವರು ಬರೆಯುವರು. ಅದರಲ್ಲಿ ಗೀತೆಗೆ ಇರುವ ಸಾಂಖ್ಯಸಂಬಂಧವನ್ನು ಆದಷ್ಟು ಸ್ಫುಟಗೊಳಿಸುವೆವೆಂದು ಅಪ್ಪಣೆಕೊಡಿಸಿರುತ್ತಾರೆ.

ಭಗವಂತನ ದಯೆಯಿಂದ ಅವರ ಸಂಕಲ್ಪವು ಪೂರ್ತಿಭವಿಸಲೆಂದು ಹಾರೈಸುತ್ತೇವೆ.

**ಹೊಳೆನರಸೀಪುರ**
15-7-64

**ವೈ. ನರಸಪ್ಪ,**
**ಕಾರ್ಯಕಾರಿಸಮಿತಿಯ ಅಧ್ಯಕ್ಷ**
**ಅಧ್ಯಾತ್ಮಪ್ರಕಾಶಕಾರ್ಯಾಲಯ.**

# ಒಂದನೆಯ ಮುದ್ರಣದ ಪೀಠಿಕೆ

ನಮ್ಮ ದೇಶದಲ್ಲಿ ವೇದಾಂತವೊಂದನ್ನೇ ಜನರು ಪರಮಪುರುಷಾರ್ಥವನ್ನು ಕೊಡುವ ದರ್ಶನವೆಂದು ಈಗ ಭಾವಿಸಿರುವರಾದರೂ ಈ ದರ್ಶನದ ತತ್ತ್ವವನ್ನು ತಿಳಿಯುವದಕ್ಕೆ ಉಳಿದ ದರ್ಶನಗಳ ಪರಿಚಯವೂ ಅಷ್ಟಿಷ್ಟು ಬೇಕೇ ಆಗುವದು. ಅದರಲ್ಲಿಯೂ ಸಾಂಖ್ಯದರ್ಶನವು ವೇದಾಂತಕ್ಕೆ ತೀರ ಸಮೀಪದ ಸಂಬಂಧವುಳ್ಳದ್ದಾಗಿರುವದು, ಇದರ ಯುಕ್ತಿಗಳೂ ಬಲುಮಟ್ಟಿಗೆ ಅನುಭವಕ್ಕೆ ಹೊಂದುವವುಗಳೇ ಆಗಿವೆ. ಆದ್ದರಿಂದ ಎಷ್ಟೋ ಜನರು ಸಾಂಖ್ಯದರ್ಶನವನ್ನೇ ವೇದಾಂತವೆಂದು ಭ್ರಮಿಸುವದೂ ಅಲ್ಲಲ್ಲಿ ಕಂಡುಬರುತ್ತದೆ.

ಈ ಎಲ್ಲ ಕಾರಣಗಳಿಂದ ಸಾಂಖ್ಯದ ಸಾರವನ್ನೂ ಸಾಂಖ್ಯವೇದಾಂತಗಳಿರುವ ತಾರತಮ್ಯವನ್ನೂ ತಕ್ಕಮಟ್ಟಿಗೆ ತಿಳಿಸಿಕೊಡುವ ಈ ಪುಟ್ಟ ಗ್ರಂಥವನ್ನು ಹೊರಕ್ಕೆ ತಂದಿದ್ದೇನೆ. ಸಾಂಖ್ಯಶಾಸ್ತ್ರಕ್ಕೆ 'ತತ್ತ್ವಸಮಾಸ'ವೆಂದೂ 'ಸಾಂಖ್ಯ ಪ್ರವಚನ'ವೆಂದೂ ಎರಡು ಬಗೆಯ ಸೂತ್ರಗಳು ಪ್ರಚಾರದಲ್ಲಿವೆ. ಇವುಗಳಲ್ಲಿ ತತ್ತ್ವಸಮಾಸವೇ ಆದಿಕಪಿಲರಿಂದ ಪ್ರೋಕ್ತವಾದದ್ದೆಂದು ಕೆಲವರು ವ್ಯಾಖ್ಯಾನ ಕಾರರು ಅಭಿಪ್ರಾಯಪಡುತ್ತಾರೆ. ಈಚೆಗೆ ಮ್ಯಾಕ್ಸ್‌ಮುಲ್ಲರ್ ಮುಂತಾದ ಪಾಶ್ಚಾತ್ಯವಿದ್ವಾಂಸರೂ ಈ ಸೂತ್ರಗಳು ಬಲುಪ್ರಾಚೀನವೆಂದು ಹೇಳಿರುವರು. ಈ ಕಾರಣದಿಂದಲೂ ಇದನ್ನು ಸಾಂಖ್ಯದ ಪ್ರಥಮಪುಸ್ತಕವಾಗಿ ಭಾವಿಸಬಹುದಾಗಿದೆ.

ಇಲ್ಲಿ ಕೊಟ್ಟಿರುವ ಸೂತ್ರಕ್ರಮವು ಪ್ರಚಾರವಾಗಿರುವ ಪುಸ್ತಕಗಳ ಪಾಠವನ್ನೇ ಅನುಸರಿಸಿಲ್ಲ. ಬೊಂಬಾಯಿ, ಕಲ್ಕತ್ತಾ, ಕಾಶಿ- ಈ ಪ್ರದೇಶಗಳಲ್ಲಿ ಪ್ರಕಟಿತವಾಗಿರುವ ಪಾಠಗಳು ಭಿನ್ನಭಿನ್ನವಾಗಿರುವವಲ್ಲದೆ ಸೂತ್ರಸಂಖ್ಯೆಯೂ ಹೆಚ್ಚುಕಡಿಮೆಯಾಗಿರುವವು. ಆದರೆ ಮುಖ್ಯವಾದ ತತ್ತ್ವಾರ್ಥವನ್ನು ಹೇಳಿರುವ ಗ್ರಂಥಭಾಗವು ಎಲ್ಲಾ ಪುಸ್ತಕಗಳಲ್ಲಿಯೂ ಬಲುಮಟ್ಟಿಗೆ ಒಂದೇ ಆಗಿರುವದರಿಂದ ಮಿಕ್ಕ ಭಾಗದಲ್ಲಿರುವ ಬಹುಸ್ವಲ್ಪ ಪಾಠಭೇದದಿಂದ ವಾಚಕರಿಗೆ ಯಾವ ತೊಂದರೆಯೂ ಆಗುವಂತಿಲ್ಲ. ಈಗ ಪ್ರಕಾಶಪಡಿಸಿರುವ ಕನ್ನಡದ ವ್ಯಾಖ್ಯಾನವು ಸ್ವತಂತ್ರವಾಗಿಯೇ ಬರೆದದ್ದಾದರೂ ಸಂಸ್ಕೃತದಲ್ಲಿರುವ ವೃತ್ತಿಗಳೇ ಇದಕ್ಕೆ ಆಧಾರವಾಗಿವೆ.

ಸಾಂಖ್ಯಸಿದ್ಧಾಂತವನ್ನು ಶಾಂಕರಭಾಷ್ಯವೇ ಮುಂತಾದ ವೇದಾಂತಗ್ರಂಥಗಳಲ್ಲಿ ಖಂಡಿಸಿರುತ್ತದೆ; ಕೆಲವು ಕಡೆಗಳಲ್ಲಿ ಇದೇ ಗ್ರಂಥಗಳು ಸಾಂಖ್ಯಪ್ರಕ್ರಿಯೆಯನ್ನೇ ಅವಲಂಬಿಸಿರುತ್ತವೆ. ಆದ್ದರಿಂದ ಸಾಂಖ್ಯದ ಯಾವ ಭಾಗವು ವೇದಾಂತಕ್ಕೆ ಒಪ್ಪಾಗಿರುವದು, ಯಾವದು ಸಮ್ಮತವಲ್ಲ- ಎಂಬುದನ್ನು ಸಂಕ್ಷೇಪವಾಗಿ ತಿಳಿಸುವ ಒಂದು ಉಪಲೇಖನವನ್ನೂ ಗ್ರಂಥದ ಕೊನೆಯಲ್ಲಿ ಬರೆದಿರುತ್ತೇನೆ.

ಈ ಅಮೋಘವಾದ ಪುಟ್ಟಗ್ರಂಥವನ್ನು ಬೆಳಕಿಗೆ ಹಿಡಿಯುವದಕ್ಕೆ ಸಹಾಯಮಾಡಿದ ಕೀರ್ತಿಯು **ಶ್ರೀಯುತ ಪಿ. ಎಸ್. ಸೂರ್ಯನಾರಣಪ್ಪನವರು, ಸಬ್ ಓವರ್ಸಿಯರ್, ಬೆಂಗಳೂರು**- ಇವರಿಗೆ ಸಲ್ಲತಕ್ಕದ್ದಾಗಿರುವದು. ಇವರು ತಮ್ಮ ಮಕ್ಕಳ ಉಪನಯನಮಹೋತ್ಸವಕಾಲದಲ್ಲಿ ಬ್ರಹ್ಮವಿದ್ಯೆಯ ಪ್ರಸಾರಕ್ಕೆಂದು ಕೊಟ್ಟ ದ್ರವ್ಯವನ್ನು ಇದರ ಅಚ್ಚಿನ ವೆಚ್ಚಕ್ಕೆ ವಿನಿಯೋಗಿಸಿರುತ್ತೇನೆ. ಜ್ಞಾನಪ್ರಧಾನವಾದ ಗಾಯತ್ರಿಯ ಉಪದೇಶದ ಸಮಯದಲ್ಲಿ ಈ ಬಗೆಯ ದಾನವನ್ನು ಶ್ರದ್ಧೆಯಿಂದ ಮಾಡುವದು ಕರ್ಮಕ್ಕೆ ಹೆಚ್ಚಿನ ವೀರ್ಯವನ್ನು ಕೊಡುವದೆಂಬುದರಲ್ಲಿ ಸಂದೇಹವಿಲ್ಲ. **ಶ್ರೀಯುತ ಪಿ. ಎಸ್. ಸೂರ್ಯನಾರಣಪ್ಪನವರು** ಬ್ರಹ್ಮವಿದ್ಯೆಗೆ ಸ್ವಹಸ್ತಪರಹಸ್ತಗಳಿಂದ ಇದೇ ರೀತಿಯಲ್ಲಿ ಪ್ರೋತ್ಸಾಹವನ್ನೀಯುತ್ತಾ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಿ ಚಿರಕಾಲ ಆಯುರಾರೋಗ್ಯೈಶ್ವರ್ಯಗಳಿಂದ ಕೂಡಿ ಬಾಳಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಇಂಥ ಗ್ರಂಥಗಳಲ್ಲಿ ಜನರಿಗೆ ಎಷ್ಟರಮಟ್ಟಿಗೆ ರುಚಿಯೆಂಬುದನ್ನು ನೋಡಿ ಸಾಂಖ್ಯಕಾರಿಕೆಯೇ ಮುಂತಾದ ದೊಡ್ಡ ಗ್ರಂಥಗಳಿಗೆ ಕೈಹಾಕುವೆನು.

ಅಂಗೀರಸಸಂವತ್ಸರದ ಶ್ರಾವಣ ಶುದ್ಧ ೨
ಬೆಂಗಳೂರು ಸಿಟಿ

**ಗ್ರಂಥಕರ್ತ.**

# ಶುದ್ಧ ಪಡಿ

| ಪುಟ | ಪಂಕ್ತಿ | ಇರಬೇಕಾದದ್ದು |
|---|---|---|
| ೧ | ೮ | ತತ್ತ್ವ |
| ೧ | ಕೆ. ೨ | ಬೇಕು |
| ೪ | ಕೆ. ೮ | ಅನುಭವಿಸುವದಕ್ಕೆ |
| ೧೧ | ೩ | ಸ್ವಚ್ಛನಾಗಿ |
| ೨೦ | ೨ | ಕರ್ಮಾತ್ಮರುಗಳು |
| ೨೯ | ಕೆ. ೭ | ಪ್ರಧಾನಕ್ಕೆ |
| ೩೭ | ಕೆ. ೯ | ವೇದಾಂತಿಗಳು |

# ವಿಷಯಾನುಕ್ರಮಣಿಕೆ


1. ಇನ್ನು ಆದ್ದರಿಂದ ತತ್ವದಲ್ಲಿ ಸಮಾಸವು ಹೇಳಲ್ಪಡುವದು
2. ಎಂಟು ಪ್ರಕೃತಿಗಳು
3. ಹದಿನಾರು ವಿಕಾರಗಳು
4. ಪುರುಷನು
5. ಮೂರು ಗುಣಗಳ ಒಟ್ಟು
6. ಸಂಚಾರವು
7. ಪ್ರತಿ ಸಂಚಾರವು
8. ಅಧ್ಯಾತ್ಮವು ಆಧಿಭೂತವು ಮತ್ತು ಅಧಿದೈವತವು
9. ಐದು ಅಭಿಬುದ್ಧಿಗಳು
10. ಐದು ಕರ್ಮಯೋನಿಗಳು
11. ಐದು ವಾಯುಗಳು
12. ಐದು ಕರ್ಮಾತ್ಮಗಳು
13. ಐದು ಕವಲುಗಳ ಅವಿದೆ
14. ಇಪ್ಪತ್ತೆಂಟು ಬಗೆಯಾಗಿರುವ ಅಶಕ್ತಿಯು
15. ಒಂಭತ್ತು ಬಗೆಯ ತುಷ್ಟಿ
16. ಸಿದ್ಧಿಯು ಎಂಟು ಬಗೆ
17. ಹತ್ತು ಮೂಲಿಕಾರ್ಥಗಳು
18. ಅನುಗ್ರಹಸರ್ಗವು
19. ಹದಿನಾಲ್ಕುವಿಧವಾದ ಭೂತಸರ್ಗವು
20. ಮೂರು ಬಗೆಯ ಬಂಧವು

21. ಮೂರು ಬಗೆಯ ಮೋಕ್ಷವು

22. ಮೂರು ವಿಧವಾದ ಪ್ರಮಾಣವು

23. ಇದೇ ಹೆಚ್ಚಿನ ಪರಮಾರ್ಥವು

24. ಇದನ್ನು ಚೆನ್ನಾಗಿ ಅರಿತರ ಕೃತಕೃತ್ಯನಾಗುವನು

25. ಮತ್ತೆ ಮೂರು ಬಗೆಯಾದ ದುಃಖಕ್ಕೆ ಸಿಕ್ಕಿ ನರಳುವದಿಲ್ಲ.

ಸಾಂಖ್ಯ ವೇದಾಂತಗಳ ತಾರತಮ್ಯ

ಶಬ್ದಾನುಕ್ರಮಣಿಕೆ

ವಿಚಾರಕರಿಗೆ ಕೆಲವು ಪ್ರಶ್ನೆಗಳು

# ತತ್ತ್ವಸಮಾಸ

## ಅಥಾತಸ್ತತ್ತ್ವಸಮಾಸಃ ॥ ೧ ॥

### ೧. ಇನ್ನು ಆದ್ದರಿಂದ ತತ್ತ್ವದಲ್ಲಿ ಸಮಾಸವು ಹೇಳಲ್ಪಡುವದು.

ಇಲ್ಲಿ 'ಇನ್ನು' ಎಂಬರ್ಥದ **ಅಥ**ಶಬ್ದವನ್ನು ಮಂಗಲಕ್ಕಾಗಿಯೂ ಶಾಸ್ತ್ರಪ್ರಾರಂಭವನ್ನು ಸೂಚಿಸುವದಕ್ಕಾಗಿಯೂ ಉಪಯೋಗಿಸಿರುತ್ತದೆ. **ತತ್ತ್ವ**ವೆಂದರೆ ಮುಂದೆ ವಿವರಿಸುವ ಇಪ್ಪತ್ತೈದು ಪದಾರ್ಥಗಳು. ಸಮಾಸವೆಂದರೆ ಸಂಕ್ಷೇಪವು. ತತ್ತ್ವಗಳ ಸ್ವರೂಪವನ್ನು ಸಂಕ್ಷೇಪವಾಗಿ ತಿಳಿಸುತ್ತೇವೆ –ಎಂದರ್ಥ.

**'ಆದ್ದರಿಂದ'** ಎಂದರೆ ತತ್ತ್ವವನ್ನು ತಿಳಿದ ಹೊರತು ದುಃಖನಿವೃತ್ತಿಯಾಗುವದಿಲ್ಲವಾದ್ದರಿಂದ–ಎಂದರ್ಥ. ಸಾಂಖ್ಯಸಿದ್ಧಾಂತದಲ್ಲಿ ಮೂರು ವಿಧವಾದ ದುಃಖಗಳನ್ನು ಪೂರ ಬಿಡಿಸಿಕೊಳ್ಳುವದೇ ಮನುಷ್ಯನಿಗೆ ಬೇಕಾಗಿರುವ ಪರಮಪುರುಷಾರ್ಥವು. ಈ ಮೂರು ದುಃಖಗಳ ಸ್ವರೂಪವನ್ನು ಇಪ್ಪತ್ತೈದನೆಯ ಸೂತ್ರದ ವಿವರಣೆಯಲ್ಲಿ ತಿಳಿಸಿದೆ. ಮನುಷ್ಯನು ತಿಳಿದಿರುವ ಕೃಷಿ, ವಾಣಿಜ್ಯ, ವೈದ್ಯವಿದ್ಯೆ– ಮುಂತಾದವುಗಳಿಂದಾಗಲಿ ವೇದದಲ್ಲಿ ಹೇಳಿರುವ ಕರ್ಮಗಳನ್ನು ಮಾಡುವದರಿಂದಾಗಲಿ ಈ ದುಃಖಗಳು ತೀರ ಹೋಗಿಬಿಡುವದಿಲ್ಲ; ಒಂದು ಸಲ ನಾವು ತಪ್ಪಿಸಿಕೊಂಡ ದುಃಖವು ಮತ್ತೆ ಬರದಂತೆಯೇ ಹೋಗಬೇಕಾದರೆ ತತ್ತ್ವಜ್ಞಾನವೇ ಬೇಕು. ಏಕೆಂದರೆ (ತತ್ತ್ವವನ್ನು ತಿಳಿಯದೆ ಇರುವದರಿಂದಲೇ) ನಮ್ಮಲ್ಲಿ

ನಿಜವಾಗಿ ಇಲ್ಲದ ದುಃಖವನ್ನು ನಮ್ಮ ಮೇಲೆ ಹಾಕಿಕೊಂಡು ನಾವು ದುಃಖಪಡುತ್ತಿದ್ದೇವೆ. ಹೀಗೆಂಬುದೇ ಸಾಂಖ್ಯಸಿದ್ಧಾಂತವು.

'ತತ್ತ್ವದಲ್ಲಿ', ಎಂದು ಏಕವಚನವನ್ನು ಉಪಯೋಗಿಸಿರುವದು ತತ್ತ್ವಗಳೆಲ್ಲ ಒಂದೇ ಜಾತಿಯವು ಎಂದು ತಿಳಿಸುವದಕ್ಕೆ. ತತ್ತ್ವವೆಂಬುದನ್ನು ಮುಂದೆ (೨,೩,೪ರಲ್ಲಿ) ಹೇಳಿದೆ. ಇಪ್ಪತ್ತೈದು ತತ್ತ್ವಗಳು ಇವೆ.

**ಸಮಾಸ**ವೆಂದರೆ ಸಂಕ್ಷೇಪ. ಇಪ್ಪತ್ತೈದು ತತ್ತ್ವಗಳನ್ನು ಸಂಗ್ರಹವಾಗಿ ತಿಳಿಸುತ್ತೇವೆ ಎಂದು ಒಟ್ಟುಸೂತ್ರದ ಅರ್ಥ.

## ಅಷ್ಟೌ ಪ್ರಕೃತಯಃ ॥ ೨ ॥

### ೨. ಎಂಟು ಪ್ರಕೃತಿಗಳು

ಈಗ ತತ್ತ್ವಗಳನ್ನು ವಿವರಿಸುತ್ತಾರೆ. ಪ್ರಕೃತಿ, ವಿಕೃತಿ, ಪುರುಷ– ಎಂದು ತತ್ತ್ವಗಳನ್ನು ಸಂಕ್ಷೇಪವಾಗಿ ಮೂರು ಬಗೆಯಾಗಿ ವಿಂಗಡಿಸಬಹುದು.

ಪ್ರಕೃತಿಯೆಂಬ ಮಾತು ಈ ಶಾಸ್ತ್ರದಲ್ಲಿ ಆಗಾಗ್ಗೆ ಬರುತ್ತಲೇ ಇರುವದು. ಪ್ರಕೃಷ್ಟವಾದ ಕೃತಿಯುಳ್ಳದ್ದು, ಎಂದರೆ ಒಂದಾನೊಂದು ವಿಶೇಷರೂಪವಾದ ವಿಕಾರವುಳ್ಳದ್ದು ಪ್ರಕೃತಿ– ಎಂದು ಇದರ ಅವಯವಾರ್ಥವಾಗುವದು. ಕಾರ್ಯರೂಪವಾಗಿ ಪರಿಣಮಿಸುವದು ಯಾವದೋ ಅದೇ **ಪ್ರಕೃತಿ**ಯು. ಹೀಗೆ ಕಾರ್ಯರೂಪದಲ್ಲಿ ಪರಿಣಮಿಸುವ ಪ್ರಕೃತಿಗಳು ಎಂಟು. ಅವು ಯಾವವೆಂದರೆ :– ಪ್ರಧಾನ, ಬುದ್ಧಿ, ಅಹಂಕಾರ, ತನ್ಮಾತ್ರೆಗಳು ಐದು.

೧. ಜಗತ್ತಿನ ಮೂಲಸ್ಥಿತಿಯೇ **ಪ್ರಧಾನ.** ಇದು ಸಾಂಖ್ಯಶಾಸ್ತ್ರದಲ್ಲಿ ಬಹುಮುಖ್ಯವಾದವು. ಪ್ರಧಾನದಿಂದ ಜಗತ್ತೆಲ್ಲವೂ ಹುಟ್ಟಿರುವದೇ ಹೊರತು ಪ್ರಧಾನವು ಮತ್ತೊಂದರಿಂದ ಹುಟ್ಟಿ ಬಂದಿರುವದಿಲ್ಲ. ಮಿಕ್ಕ ಪ್ರಕೃತಿಗಳೂ ಕಾರ್ಯರೂಪವಾಗಿ ಪರಿಣಮಿಸುತ್ತವೆ; ಆದರೆ ಇವುಗಳಿಗೆ ಬೇರೊಂದು ಮೂಲರೂಪವಾದ ಪ್ರಕೃತಿಯಿರುವದು. ಉದಾಹರಣೆಗೆ **'ಬುದ್ಧಿ'** ಯಿಂದಲೂ ಬೇರೆ ಕೆಲವು ಕಾರ್ಯಗಳುಂಟಾಗುತ್ತವೆ; ಆದರೆ ಬುದ್ಧಿಯು ಪ್ರಧಾನದಿಂದ ಹುಟ್ಟಿರುವದು. ಹೀಗೆಯೇ 'ಅಹಂಕಾರವು' ತನ್ಮಾತ್ರೆಗಳಿಗೆ ಕಾರಣವಾಗಿರುವದರಿಂದ ಅದೂ ಪ್ರಕೃತಿಯೇ; ಆದರೆ ಅದು ತಾನೂ ಬುದ್ಧಿಯಿಂದ ಹುಟ್ಟುತ್ತದೆ, ಆದ್ದರಿಂದ ಬುದ್ಧಿಯೆಂಬುದು ಅಹಂಕಾರಕ್ಕೆ ಪ್ರಕೃತಿಯಾಯಿತು. **ಬುದ್ಧಿ** ಮುಂತಾದ ತತ್ತ್ವಗಳನ್ನು ಮುಂದೆ ವಿವರಿಸಲಾಗುವದು; ಅವುಗಳಲ್ಲಿ ಪ್ರತಿಯೊಂದೂ ಒಂದರ ವಿಕೃತಿಯಾಗಿಯೂ ಮತ್ತೊಂದಕ್ಕೆ ಪ್ರಕೃತಿಯಾಗಿಯೂ ಇರುವವೆಂದು ನೆನಪಿಡಬೇಕು. ಆದರೆ ಪ್ರಧಾನವು ಮಾತ್ರ ಮತ್ತೆ ಇತರರಿಂದಲೂ ಹುಟ್ಟುವದಿಲ್ಲ. ಬುದ್ಧಿ, ಅಹಂಕಾರ– ಮುಂತಾದವುಗಳಂತೆ ಇದು ವಿಕೃತಿಯಾಗಿಯೂ ಇರುವ ಪ್ರಕೃತಿಯಲ್ಲ; ಪ್ರಧಾನದಿಂದಲೇ ಮಿಕ್ಕ ಎಲ್ಲಾ ಪ್ರಕೃತಿಗಳೂ ಹುಟ್ಟುವವು. ಆದ್ದರಿಂದ ಇದಕ್ಕೆ **'ಮೂಲಪ್ರಕೃತಿ'** ಯೆಂದೂ ಹೆಸರುಂಟು.

ಈ ಮೂಲಪ್ರಕೃತಿಯಾದ ಪ್ರಧಾನಕ್ಕೆ 'ಅವ್ಯಕ್ತ', 'ಬ್ರಹ್ಮ', 'ಕಾರಣ', 'ಅವ್ಯಾಕೃತ', 'ತಮಸ್ಸು', 'ಕ್ಷೇತ್ರ', 'ಅಕ್ಷರ'– ಮುಂತಾಗಿ ಅನೇಕ ಹೆಸರುಗಳುಂಟು. ಈ ಹೆಸರುಗಳೆಲ್ಲ ಪ್ರಧಾನದ ಸ್ವರೂಪವನ್ನು ವಿವರಿಸುವವು. ಹೇಗೆಂದರೆ, ಲೋಕ

ದಲ್ಲಿ ಪದಾರ್ಥಗಳು ಹೇಗೆ ಗಡಿಗೆ, ಮಡಕೆ, ಕುಡಿಕೆ, ಬಟ್ಟೆ, ಉಡಿಗೆ, ತೊಡಿಗೆ, ಹಾಸಿಗೆ– ಎಂದು ಇಂದ್ರಿಯಗಳಿಗೆ ಎದ್ದು ತೋರಿಕೊಳ್ಳುವವೋ ಹಾಗೆ ಪ್ರಧಾನವು ತೋರುವದಿಲ್ಲ ; ಆದ್ದರಿಂದ ಇದಕ್ಕೆ 'ಅವ್ಯಕ್ತ' ಎಂದರೆ ಸ್ಪಷ್ಟವಾಗಿ ತೋರಿಕೊಳ್ಳದೆ ಇರುವದು ಎಂದು ಹೆಸರು. ಹೀಗೆಯೇ 'ಬ್ರಹ್ಮ'ವೆಂದರೆ ಬಲು ದೊಡ್ಡದೆಂದರ್ಥ; ಪ್ರಧಾನದಲ್ಲಿ ಎಲ್ಲವೂ ಅಡಕವಾಗಿರುವದರಿಂದ ಇದೇ ದೊಡ್ಡದು. 'ಕಾರಣ'ವೆಂದರೆ ಎಲ್ಲವೂ ಹುಟ್ಟುವದಕ್ಕೆ ಬೇಕಾಗಿರುವ ವಸ್ತು ; ಪ್ರಧಾನದಿಂದಲೇ ಜಗತ್ತೆಲ್ಲವೂ ಹುಟ್ಟುವದೆಂದೂ ಇದು ಮತ್ತೀತರಿಂದಲೂ ಹುಟ್ಟಲ್ಲವೆಂದೂ ಹೇಳುವದೇ ಸಾಂಖ್ಯರ ಸಿದ್ಧಾಂತವು. 'ಅವ್ಯಾಕೃತ'ವೆಂದರೆ ಬಿಡಿಬಿಡಿಯಾಗಿಲ್ಲದ್ದೆಂದರ್ಥ ; ಪ್ರಧಾನವು ಒಂದೇ ರೂಪವಾಗಿ ಇರುವದೇ ಹೊರತು ಇದರಲ್ಲಿ ಬೇರೆಬೇರೆಯ ರೂಪಗಳು ಯಾವವೂ ಇರುವದಿಲ್ಲ. ಆದ್ದರಿಂದ ಇದು ಅವ್ಯಾಕೃತವು. 'ತಮುಸ್ಸು' ಎಂದರೆ ಕತ್ತಲೆ ; ಪ್ರಧಾನದ ಸ್ವರೂಪವು ಇಂಥದ್ದೆಂದು ನಿರ್ಣಯನಾಗಿ ಗೊತ್ತಾಗುವದಿಲ್ಲವಾದ್ದರಿಂದ ಅದು ತಮುಸ್ಸೆನಿಸುವದು. 'ಕ್ಷೇತ್ರ'ವೆಂದರೆ ಪುರುಷನು ಸುಖದುಃಖಗಳನ್ನು ಅನುಭವಿಸುವ ಸ್ಥಳ ; ಬೇರೆ ಬೇರೆಯ ಪ್ರಾಣಿಗಳು ಸುಖದುಃಖಗಳನ್ನು ಅನುಭವಿಸುವದಕೆ ಬೇಕಾದ ಹೊರಗಿನ ಸಾಮುಗ್ರಿಯೂ ಶರೀರೇಂದ್ರಿಯಮನಸ್ಸುಗಳೆಂಬ ಒಳಗಿನ ಸಾಮುಗ್ರಿಯೂ ಪ್ರಧಾನದಿಂದಲೇ ಆಗಿರುವದರಿಂದ ಪ್ರಧಾನವೇ ಸುಖದುಃಖಗಳನ್ನುಂಟುಮಾಡುವ ಕ್ಷೇತ್ರವಾಗಿರುವದು. 'ಅಕ್ಷರ'ವೆಂದರೆ ನಾಶವಿಲ್ಲದ್ದು ; ಪ್ರಧಾನವು ನಿತ್ಯವೆಂದು ಸಾಂಖ್ಯರ ಮತವಿದೆ.

೨. ಇನ್ನು ಬುದ್ಧಿಯೆಂಬುದು ಈ ಪ್ರಧಾನದಿಂದ ಹುಟ್ಟಿದ ತತ್ತ್ವವು. ಇದು ಎರಡನೆಯ ಪ್ರಕೃತಿಯು ; ಇದರಿಂದಲೇ

ಮುಂದಿನ ಅಹಂಕಾರವೆಂಬ ತತ್ತ್ವವುಂಟಾಗಿರುತ್ತದೆ. ಆದ್ದರಿಂದ ಇದು **ಪ್ರಕೃತಿವಿಕೃತಿಯಾಯಿತು**, ಇದಕ್ಕೆ ಕಾರಣವೇನೆಂದಡೆ, ಇದರಿಂದಲೂ ಒಂದು ಕಾರ್ಯವಾಗುತ್ತದೆ. ಮುಂದೆ ಹೇಳುವ ಅಹಂಕಾರ, ತನ್ಮಾತ್ರೆ– ಇವುಗಳೂ ಹೀಗೆಯೇ ಪ್ರಕೃತಿವಿಕೃತಿಗಳು. ಇದಕ್ಕೆ 'ಮಹತ್ತು', 'ಮನಸ್ಸು', 'ಬ್ರಹ್ಮ', 'ಮತಿ', 'ಖ್ಯಾತಿ', 'ಪ್ರಜ್ಞಾ', 'ಭೂತಿ' –ಇವೇ ಮುಂತಾದ ಬೇರೆ ಕೆಲವು ಹೆಸರುಗಳೂ ಉಂಟು. ಈ ಹೆಸರುಗಳು ಬುದ್ಧಿಯ ಸ್ವಭಾವದ ಮೇಲೆ ಬಂದಿರುವವು. ಧರ್ಮ, ಅಧರ್ಮ, ವೈರಾಗ್ಯ, ಅವೈರಾಗ್ಯ, ಐಶ್ವರ್ಯ (ಸ್ವತಂತ್ರವಾಗಿರುವದು), ಅನೈಶ್ವರ್ಯ, ಜ್ಞಾನ, ಅಜ್ಞಾನ– ಇವೆಲ್ಲ ಬುದ್ಧಿಯ ರೂಪಗಳು.

೩. ಬುದ್ಧಿಯಿಂದ ಅಭಿಮಾನರೂಪವಾಗಿರುವ **'ಅಹಂಕಾರವು'** ಉಂಟಾಗುತ್ತದೆ. ಇದೂ ಪ್ರಕೃತಿಯೇ; ಏಕೆಂದರೆ ಇದರಿಂದ ಐದು ತನ್ಮಾತ್ರೆಗಳುಂಟಾಗುತ್ತವೆ. ನಾನು ಕೇಳುತ್ತಿದ್ದೇನೆ, ನಾನು ಮುಟ್ಟುತ್ತಿದ್ದೇನೆ, ನಾನು ನೋಡುತ್ತಿದ್ದೇನೆ, ನಾನು ಮೂಸುತ್ತಿದ್ದೇನೆ, ನಾನು ರುಚಿನೋಡುತ್ತಿದ್ದೇನೆ, ನಾನು ಒಡೆಯನು, ನಾನು ಆಳು– ಹೀಗೆಲ್ಲಾ 'ನಾನು, ನಾನು'– ಎಂದು ತೋರುವದು ಅಹಂಕಾರವು.

೪–೮. ಈ ಅಹಂಕಾರದಿಂದ ಹುಟ್ಟುವ ಐದು **'ತನ್ಮಾತ್ರೆಗಳು'** ಪ್ರಕೃತಿಯೇ ; ಏಕೆಂದರೆ ಇವುಗಳಿಂದ ಮಹಾಭೂತಗಳೂ ಇಂದ್ರಿಯಗಳೂ ಉಂಟಾಗುತ್ತವೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧ– ಇವೇ ತನ್ಮಾತ್ರೆಗಳು. ತನ್ಮಾತ್ರವೆಂಬ ಶಬ್ದಕ್ಕೆ ಅದು ಮಾತ್ರವೆಂದರ್ಥ. ಶಬ್ದತನ್ಮಾತ್ರದಲ್ಲಿ ಶಬ್ದವೊಂದು ತೋರುವದೇ ಹೊರತು ಉದಾತ್ತ, ಅನುದಾತ್ತ– ಮುಂತಾದ ಭೇದ

ವಾಗಲಿ, ನಿಷಾದ, ಋಷಭ, ಗಾಂಧಾರ, ಮಧ್ಯಮ– ಮುಂತಾದ ಭೇದವಾಗಲಿ ತೋರುವದಿಲ್ಲ. ಇದರಂತೆ ಸ್ಪರ್ಶತನ್ಮಾತ್ರವೆಂದರೆ ಬರಿಯ ಸ್ಪರ್ಶವೇ ; ತಣ್ಣಗೆ, ಬೆಚ್ಚಗೆ– ಮುಂತಾದ ಭೇದಗಳು ಅದರಲ್ಲಿ ಕಂಡುಬರುವದಿಲ್ಲ. ಹೀಗೆಯೇ ರೂಪತನ್ಮಾತ್ರದಲ್ಲಿ ಬಿಳಿದು, ಕರಿದು– ಮುಂತಾದದ್ದು ತೋರುವದಿಲ್ಲ ; ರಸತನ್ಮಾತ್ರ ದಲ್ಲಿ ಉಪ್ಪು, ಹುಳಿ, ಕಾರ– ಮುಂತಾದದ್ದು ತೋರುವದಿಲ್ಲ ; ಗಂಧತನ್ಮಾತ್ರದಲ್ಲಿ ಕೆಟ್ಟವಾಸನೆ, ಸುವಾಸನೆ– ಮುಂತಾದ ಪ್ರಭೇದಗಳು ತೋರುವದಿಲ್ಲ. ಹೀಗೆ ವಿಶೇಷರೂಪವಿಲ್ಲದೆ ಸಾಮಾನ್ಯರೂಪದಲ್ಲಿರುವ ತನ್ಮಾತ್ರೆಗಳಿಗೆ **ಸೂಕ್ಷ್ಮಭೂತ**ಗಳೆಂದೂ ಹೆಸರುಂಟು.

ಈ ರೀತಿಯಲ್ಲಿ ಅವ್ಯಕ್ತ, ಬುದ್ಧಿ, ಅಹಂಕಾರ, ತನ್ಮಾತ್ರೆ ಗಳು ಐದು– ಇವು ಎಂಟೂ ಪ್ರಕೃತಿಗಳೆನಿಸುವವು. ಇವುಗಳಲ್ಲಿ ಅವ್ಯಕ್ತವು ಮೂಲಪ್ರಕೃತಿ, ಮಿಕ್ಕ ಏಳೂ ಪ್ರಕೃತಿವಿಕೃತಿಗಳು.

## ಷೋಡಶ ವಿಕಾರಾಃ ॥ ೩ ॥

### ೩. ಹದಿನಾರು ವಿಕಾರಗಳು

ಹನ್ನೊಂದು ಇಂದ್ರಿಯಗಳು, ಐದು ಮಹಾಭೂತಗಳು– ಈ ಹದಿನಾರೂ **'ವಿಕೃತಿ'** ಅಥವಾ ವಿಕಾರ ಎನಿಸಿಕೊಳ್ಳುತ್ತವೆ. ಹಿಂದೆ ಹೇಳಿದ ಪ್ರಕೃತಿಗಳಲ್ಲಿ ಪ್ರಧಾನ (ಅಥವಾ ಅವ್ಯಕ್ತ)ವನ್ನು ಬಿಟ್ಟರೆ ಉಳಿದ ಏಳೂ ವಿಕೃತಿಗಳೇ, ಅಂದರೆ ಮತ್ತೊಂದು ಕಾರಣ ದಿಂದ ಆಗುವ ಕಾರ್ಯಗಳೇ. ಆದರೆ ಅವು ಪ್ರಕೃತಿಗಳೂ ಆಗಿರುವವು. ಇಲ್ಲಿ ಹೇಳಿರುವ ಹದಿನಾರು ಯಾವದಕ್ಕೂ ಪ್ರಕೃತಿ ಯಲ್ಲ. ಆದ್ದರಿಂದ ಇವು ಪ್ರಕೃತಿವಿಕೃತಿಗಳಲ್ಲ, ಬರಿಯ ವಿಕಾರ

ಗಳೇ; ಕಾರ್ಯಗಳೇ. ಇವುಗಳಿಂದ ಮತ್ತೇನೂ ಹುಟ್ಟುವದಿಲ್ಲ ವೆಂದು ಅರ್ಥವಲ್ಲ. ಉದಾಹರಣೆಗೆ ಮಹಾಭೂತಗಳಿಂದ ಹುಟ್ಟುವ ಪದಾರ್ಥಗಳನ್ನು ಕುರಿತು ಮುಂದೆ ಹತ್ತೊಂಬತ್ತನೆಯ ಸೂತ್ರದಲ್ಲಿ ಹೇಳಿರುತ್ತದೆ. ಆದರೆ **ಇಂದ್ರಿಯಗಳು, ಮಹಾ ಭೂತಗಳು- ಇವುಗಳಿಂದ ಮತ್ತಿಯಾವ ಬೇರೆ 'ತತ್ತ್ವ'ವೂ ಹುಟ್ಟುವದಿ ; ಇವು ಮಾತ್ರ ಅಹಂಕಾರದಿಂದಲೂ ತನ್ಮಾತ್ರೆ ಗಳಿಂದಲೂ ಹುಟ್ಟುತ್ತವೆ.** ಮಣ್ಣಿನಿಂದ ಹುಟ್ಟುವ ಮಡಕೆ ಯನ್ನು ತತ್ತ್ವದೃಷ್ಟಿಯಿಂದ ನೋಡಿದರೆ ಮಡಕೆ ಎಂಬುದು ಬೇರೆ ಯಾದ ಪದಾರ್ಥವಾಗುವದಿಲ್ಲ; ಅದೂ ಮಣ್ಣಿನಲ್ಲಿಯೇ ಅಡಕ ವಾಗುವದು. ಅದರಂತೆ ಹದಿನಾರು ವಿಕಾರಗಳಿಂದ ಹುಟ್ಟುವ ಕಾರ್ಯಗಳು ತತ್ತ್ವದೃಷ್ಟಿಯಿಂದ ಈ ವಿಕಾರಗಳಿಗಿಂತ ಭಿನ್ನ ವಾಗಿರುವದಿಲ್ಲ. ಆದ್ದರಿಂದ ಈ ಹದಿನಾರು ತತ್ತ್ವಗಳನ್ನು **ವಿಕಾರ** ಗಳು ಎಂಬ ಬೇರೆ ಹೆಸರಿನಿಂದ ಕರೆದಿರುತ್ತದೆ.

ಇಂದ್ರಿಯಗಳು ಹನ್ನೊಂದಷ್ಟೆ? ಇವುಗಳಲ್ಲಿ ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗು- ಇವುಗಳಲ್ಲಿರುವ ಐದು ಇಂದ್ರಿಯ ಗಳಿಂದ ನಮಗೆ ಬೇರೆಬೇರೆ ಜ್ಞಾನವಾಗುತ್ತದೆ. ಹೇಗೆಂದರೆ ಕಿವಿಯಿಂದ ಶಬ್ದವು ಕೇಳಬರುತ್ತದೆ; ಚರ್ಮದಿಂದ ವಸ್ತುವಿನ ಸ್ಪರ್ಶವು ಗೊತ್ತಾಗುತ್ತದೆ; ಕಣ್ಣಿನಿಂದ ರೂಪವು ಅರಿಯಲ್ಪಡು ತ್ತದೆ; ನಾಲಗೆಯಿಂದ ರಸವು (ಅಂದರೆ ಸವಿಯು) ತಿಳಿಯ ಬರುತ್ತದೆ; ಮೂಗಿನಿಂದ ಗಂಧವು (ಎಂದರೆ ವಾಸನೆಯು) ತಿಳಿಯು ತ್ತದೆ. ಹೀಗೆ ಬೇರೆಬೇರೆ ಜ್ಞಾನಗಳನ್ನುಂಟುಮಾಡುವ ಇವುಗಳಿಗೆ **ಜ್ಞಾನೇಂದ್ರಿಯ**ಗಳೆಂದು ಹೆಸರುಕೊಟ್ಟಿದ್ದಾರೆ. ಬಾಯಿ, ಕೈ, ಕಾಲು, ಪಾಯು, ಉಪಸ್ಥ- ಇವುಗಳಲ್ಲಿರುವ ಇಂದ್ರಿಯಗಳಲ್ಲಿ

ಒಂದೊಂದೂ ಒಂದೊಂದು ಕೆಲಸವನ್ನು ಮಾಡುವದಕ್ಕೆ ಸಾಧನ ವಾಗಿದೆ. ಹೇಗೆಂದರೆ ಬಾಯಿಂದ ಮಾತಾಡುತ್ತೇವೆ; ಕೈಯಿಂದ ವಸ್ತುವನ್ನು ತೆಗೆದುಕೊಳ್ಳುತ್ತೇವೆ. ಕಾಲಿನಿಂದ ನಡೆಯುತ್ತೇವೆ; ಹೀಗೆ ಒಂದೊಂದರಿಂದ ಒಂದೊಂದು ಕೆಲಸವನ್ನು ಮಾಡುತ್ತೇವೆ. ಆದ್ದರಿಂದ ಈ ಐದು ಇಂದ್ರಿಯಗಳಿಗೆ **ಕರ್ಮೇಂದ್ರಿಯ** ಗಳೆಂದು ಹೆಸರು.

ಇದುವರೆಗೆ ಹೇಳಿರುವ ಇಂದ್ರಿಯಗಳ ವಿಷಯದಲ್ಲಿ ತಿಳಿಯ ಬೇಕಾದ ಒಂದು ವಿಷಯವುಂಟು. ಅದೇನೆಂದರೆ: ನಮ್ಮ ಶರೀರ ದಲ್ಲಿ ಕಾಣುವ ಕಣ್ಣು, ಕಿವಿ- ಮುಂತಾದ ಭಾಗಗಳೇ ಇಂದ್ರಿಯ ಗಳಲ್ಲ; ಇವು ಇಂದ್ರಿಯಗಳು ಕೆಲಸಮಾಡುವ ಸ್ಥಾನಗಳು. ಇವುಗಳನ್ನು ಇಂದ್ರಿಯ'ಗೋಳಕ'ಗಳೆಂದೂ ಕರೆಯುವದುಂಟು. ಕುರುಡರಿಗೂ ನಿದ್ರೆ, ಮದ, ಮೂರ್ಛೆ, ಮರಣ- ಮುಂತಾದ ಅವಸ್ಥೆಗಳಲ್ಲಿರುವವರಿಗೂ ಕಣ್ಣಿನ ಗೋಳಕವು ಇದ್ದರೂ ನೋಟ ವೇನೂ ಕಾಣಿಸುವದಿಲ್ಲ; ಕಣ್ಣಿನಿಂದ ಕೆಲಸಮಾಡಬೇಕಾದ ಇಂದ್ರಿಯವು ಕೆಲಸವನ್ನು ಮಾಡದಿರುವದೇ ಇದಕ್ಕೆ ಕಾರಣ. ಹೀಗೆ ಇಂದ್ರಿಯಗಳು ಬೇರೆ, ಇಂದ್ರಿಯಗಳ ಗೋಳಕಗಳು ಬೇರೆ -ಎಂಬುದನ್ನು ಮೇಲೆ ಹೇಳಿರುವ ಜ್ಞಾನೇಂದ್ರಿಯಗಳ ವಿಷಯ ದಲ್ಲಿಯೂ ಕರ್ಮೇಂದ್ರಿಯಗಳ ವಿಷಯದಲ್ಲಿಯೂ ನೆನಪಿನಲ್ಲಿಟ್ಟಿರ ಬೇಕು. ಇನ್ನು ನಮಗೆ ಮನಸ್ಸೆಂಬ ಮತ್ತೊಂದು ಇಂದ್ರಿಯವೂ ಇರುವದು.* ಇದು ಸಂಕಲ್ಪವೇ ಮುಂತಾದ ಕಾರ್ಯಗಳನ್ನು ಮಾಡುವದು ಮತ್ತು ಇಂದ್ರಿಯಗಳಿಂದ ಬಂದ ಅರಿವನ್ನು ತಿಳಿಯು ವದು. ಆದ್ದರಿಂದ ಇದು ಕರ್ಮೇಂದ್ರಿಯವೂ ಹೌದು, ಜ್ಞಾನೇಂದ್ರಿಯವೂ ಹೌದು. ಹೀಗೆ ಜ್ಞಾನೇಂದ್ರಿಯಗಳು ಐದು

ಕರ್ಮೇಂದ್ರಿಯ ಐದು, ಉಭಯೇಂದ್ರಿಯವಾದ ಮನಸ್ಸು ಒಂದು ಒಟ್ಟು ಹನ್ನೊಂದು ಇಂದ್ರಿಯಗಳು ಅಥವಾ **ಕರಣ**ಗಳು ಇರುತ್ತವೆ. ತನ್ಮಾತ್ರೆಗಳು ಅಹಂಕಾರದಿಂದ ಉಂಟಾಗುತ್ತವೆಯೆಂದು ಹಿಂದೆಯೇ ತಿಳಿಸಿದ್ದೇವಷ್ಟೆ? ಅವುಗಳಂತೆಯೇ ಇಂದ್ರಿಯಗಳೂ ಅಹಂಕಾರದಿಂದಲೇ ಹುಟ್ಟುತ್ತವೆ. ಆದರೆ ತನ್ಮಾತ್ರೆಗಳಂತೆ ಇವು ಪ್ರಕೃತಿಯಲ್ಲ, ಬರಿಯ ವಿಕೃತಿಗಳೇ, ಇವುಗಳಿಂದ ಬೇರೆ ಯಾವ ತತ್ತ್ವವೂ ಹುಟ್ಟುವದಿಲ್ಲ.

ಮಹಾಭೂತಗಳು ತನ್ಮಾತ್ರೆಗಳಿಂದ ಹುಟ್ಟುತ್ತವೆ ಎಂದು ಹಿಂದೆಯೇ ಹೇಳಿದೆಯಷ್ಟೆ? ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ– ಇವೇ **ಪಂಚಮಹಾಭೂತಗಳು.** ಗಂಧತನ್ಮಾತ್ರೆಯಿಂದ ಪೃಥಿವಿ, ರಸತನ್ಮಾತ್ರೆಯಿಂದ ಅಪ್ಪು, ರೂಪತನ್ಮಾತ್ರೆಯಿಂದ ತೇಜಸ್ಸು, ಸ್ಪರ್ಶತನ್ಮಾತ್ರೆಯಿಂದ ವಾಯು, ಶಬ್ದತನ್ಮಾತ್ರೆಯಿಂದ ಆಕಾಶ– ಹೀಗೆ ಉಂಟಾಗುವವು. ತನ್ಮಾತ್ರೆಗಳು **ಸೂಕ್ಷ್ಮ**ವಾಗಿರುವವು ; ಈ ಮಹಾಭೂತಗಳು **ಸ್ಥೂಲ**ವಾಗಿರುವವು. ಸ್ಥೂಲವೆಂದರೆ ಇಂದ್ರಿಯಕ್ಕೆ ಗೋಚರವಾಗುವ ಸ್ಥಿತಿಯಲ್ಲಿರುವದು. ಈ ಪಂಚಭೂತಗಳಿಂದಲೇ ನಮಗೆ ಕಾಣುವ ಹೊರಗಣ ಪ್ರಪಂಚವೆಲ್ಲವೂ ಆಗಿರುವದರಿಂದ ಇದು ಭೌತಿಕಪ್ರಪಂಚವೆನಿಸಿಕೊಂಡಿರುತ್ತದೆ. ಮಹಾಭೂತಗಳಿಂದ ಯಾವ ಹೊಸ ತತ್ತ್ವವೂ ಹುಟ್ಟುವದಿಲ್ಲವಾದ್ದರಿಂದ ಇವು ವಿಕೃತಿಗಳೇ ಹೊರತು ಪ್ರಕೃತಿಗಳಲ್ಲ.

ಹೀಗೆ ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಉಭಯೇಂದ್ರಿಯ– ಎಂಬ ಹನ್ನೊಂದು ಇಂದ್ರಿಯಗಳೂ ಮತ್ತು ಪಂಚಭೂತಗಳೂ ಸೇರಿ ಒಟ್ಟು **ಹದಿನಾರು ವಿಕೃತಿ**ಗಳಾದವು.

# ಪುರುಷಃ ॥ ೪ ॥

## ೪. ಪುರುಷನು

ಪುರುಷನೆಂದರೆ ಶರೀರರೂಪವಾದ ಪುರದಲ್ಲಿ ಶಯನಮಾಡಿರುವವನು ; ಅಥವಾ ಎಲ್ಲಾ ಪುರವನ್ನೂ ತುಂಬಿಕೊಂಡಿರುವವನು. ಪುರುಷನಿಗೆ 'ಜ್ಞ', 'ಅಜ', 'ಅಕ್ಷರ', 'ಆತ್ಮ', 'ಕ್ಷೇತ್ರಜ್ಞ', 'ಪ್ರಾಣ', ಜೀವನು', 'ಜಂತು'– ಮುಂತಾದ ಬೇರೆ ಹೆಸರುಗಳೂ ಉಂಟು.

ಈ ಹೆಸರುಗಳು ಪುರುಷನ ಸ್ವಭಾವಕ್ಕೆ ಅನುಸಾರವಾಗಿ ಬಂದಿರುತ್ತವೆ. ಉದಾಹರಣೆಗೆ 'ಜ್ಞ' ಎಂದರೆ ಚೇತನನೆಂದರ್ಥ. ಪುರುಷನನ್ನು ಬಿಟ್ಟು ಮಿಕ್ಕದ್ದೆಲ್ಲವೂ ಜಡ ಎಂದರೆ ಏನನ್ನೂ ಅರಿಯುಲಾರದು. ಪುರುಷನು ಮಾತ್ರ ಅರಿಯುವ (ಚೇತನ)ಶಕ್ತಿಯುಳ್ಳವನಾಗಿರುವನು. ಪುರುಷನು ಅರಿಯದೆ ಇದ್ದರೆ ಶರೀರಾದಿಗಳಾಗಲಿ ಹೊರಗಿನ ಪ್ರಪಂಚವಾಗಲಿ ಇದೆಯೆಂದು ಹೇಳುವದಕ್ಕೇ ಬರುತ್ತಿರಲಿಲ್ಲ. 'ಅಜ' ಎಂದರೆ ಹುಟ್ಟಿಲ್ಲದವನು; ನಿಜವಾಗಿ ಪುರುಷನಿಗೆ ಆದಿಯಿಲ್ಲವೆಂದು ಸಾಂಖ್ಯರ ಮತವು. ಇವನಿಗೆ ಅಂತವೂ ಇಲ್ಲವೆಂಬುದನ್ನು 'ಅಕ್ಷರ' ಎಂಬ ಮಾತು ತಿಳಿಸುವದು. 'ಆತ್ಮ'ನೆಂದರೆ ಎಲ್ಲವನ್ನೂ ವ್ಯಾಪಿಸಿರುವವನು, ಮತ್ತು ಎಲ್ಲವನ್ನೂ ಅನುಭವಿಸುವವನು. 'ಕ್ಷೇತ್ರಜ್ಞ'ನೆಂದರೆ ಕ್ಷೇತ್ರವೆಂಬ ಶರೀರವನ್ನು ಅರಿಯುವವನು; ಶರೀರವೇ ಪುರುಷನಲ್ಲ, ಶರೀರಕ್ಕಿಂತ ಭಿನ್ನವಾಗಿ ಅದನ್ನು ಅರಿಯುವವನೇ ಪುರುಷನು ಎಂಬುದನ್ನು ಕ್ಷೇತ್ರಜ್ಞನೆಂಬ ಹೆಸರು ತಿಳಿಸುವದು. 'ಪ್ರಾಣಿ' ಎಂದರೆ ಕೆಲಸಮಾಡಿಸುವವನು; ಪುರುಷನ ಸನ್ನಿಧಿಯಲ್ಲಿ ಶರೀರವು ಕೆಲಸಮಾಡುತ್ತಿರುವದು. ಆತ್ಮನು ಬರಿಯ **ಭೋಕ್ತೃ**ವೇ (ಅನುಭವಿಸುವವನೇ) ಹೊರತು **ಕರ್ತೃ** (ಕೆಲಸ

ಮಾಡುವವನು) ಅಲ್ಲ. ಭೋಕ್ತೃತ್ವವು ಇರುವಾಗ ಇವನಿಗೆ 'ಜೀವನು, ಜಂತು'- ಎಂದು ಹೆಸರು. ನಿಜವಾಗಿ ಪುರುಷನು ಅಸಂಗನು, ಎಂದರೆ ಸ್ಫಟಿಕದ ಹಾಗೆ ಸ್ವಚ್ಛನಾಗಿ ಏತರ ಅಂಟೂ ಇಲ್ಲದೆ ಇರುವವನೆಂದೂ, ಇವನಿಂದ ಮತ್ತೇನೂ ಹುಟ್ಟುವದಿಲ್ಲ ವೆಂದೂ, ಇವನು ಸೂಕ್ಷ್ಮರೂಪನು ಎಂದರೆ ಇಂದ್ರಿಯಗಳಿಗೆ ಕಾಣಿಸದವನೆಂದೂ ಸಾಂಖ್ಯರ ಸಿದ್ಧಾಂತವಿರುವದು.

ಹೀಗೆ ಪ್ರಕೃತಿಗಳು ಎಂಟು (ಇವುಗಳಲ್ಲಿ ಬರಿಯ ಪ್ರಕೃತಿ ಒಂದು, ಪ್ರಕೃತಿಯೂ ವಿಕೃತಿಯೂ ಆಗಿರುವವು ಏಳು) ; ವಿಕೃತಿ ಗಳು ಹದಿನಾರು ; ಪ್ರಕೃತಿಯೂ ಅಲ್ಲದ ವಿಕೃತಿಯೂ ಅಲ್ಲದ ಪುರುಷನೊಬ್ಬನು- ಹೀಗೆ **ತತ್ತ್ವಗಳು ಇಪ್ಪತ್ತೈದಾದವು.**

**ಪಞ್ಚವಿಶಂತಿತತ್ತ್ವಜ್ಞೋ ಯತ್ರಕುತ್ರಾಶ್ರಮೇ ಸ್ಥಿತಃ ।**
**ಜಟೀ ಮುಣ್ಡೀ ಶಿಖೀ ವಾಪಿ ಮುಚ್ಯತೇ ನಾತ್ರ ಸಂಶಯ ॥**

ಇಪ್ಪತ್ತೈದು ತತ್ತ್ವಗಳನ್ನು ತಿಳಿದವನು ಯಾವ ಆಶ್ರಮದಲ್ಲಿ ಯಾದರೂ ಇರಲಿ, ಅವನಿಗೆ ಮುಕ್ತಿಯಾಗುವದೆಂದು ಸಾಂಖ್ಯರು ಹೇಳುವರು. ಇಡಿಯ ಪ್ರಪಂಚವನ್ನೇ ವಿಶೇಷರೂಪದಿಂದ ತಿಳಿಯುವದು ಯಾವನಿಗೂ ಸಾಧ್ಯವಿಲ್ಲ ; ಆದರೆ ಪ್ರಪಂಚವೆಲ್ಲವೂ ಪುರುಷನನ್ನು ಬಿಟ್ಟು ಉಳಿದ ಇಪ್ಪತ್ತುನಾಲ್ಕು ತತ್ತ್ವಗಳಿಂದಲೇ ಆಗಿರುವದರಿಂದ ತತ್ತ್ವಗಳ ಜ್ಞಾನದಿಂದ ತಿಳಿಯಬೇಕಾದದ್ದ ನ್ನೆಲ್ಲ ಸಾಮಾನ್ಯರೂಪದಲ್ಲಿ ತಿಳಿದಂತೆಯೇ ಆಗುವದು.

## ತ್ರೈಗುಣ್ಯಮ್ ॥ ೫ ॥

### ೫. ಮೂರು ಗುಣಗಳ ಒಟ್ಟು

ಪ್ರಪಂಚವೆಲ್ಲವೂ ಇಪ್ಪತ್ತುನಾಲ್ಕು ತತ್ತ್ವಗಳಿಂದಲೇ ಆಗಿ ರುವದೆಂಬುದು ಹೇಗೆ ?- ಎಂದರೆ ಪ್ರಪಂಚಕ್ಕೆ ಮುಖ್ಯವಾಗಿ

ಎರಡು ರೂಪಗಳಿರುವವು. ಒಂದು ವ್ಯಕ್ತರೂಪ, ಇನ್ನೊಂದು ಅವ್ಯಕ್ತರೂಪ. ಅವ್ಯಕ್ತವೆಂದರೆ ಪ್ರಧಾನವೆಂದು ಹಿಂದೆಯೇ ಹೇಳಿದೇವೆ. ಉಳಿದ ಇಪ್ಪತ್ತುಮೂರು ತತ್ತ್ವಗಳು ವ್ಯಕ್ತವು. ವ್ಯಕ್ತವೆಂದರೆ ಅವುಗಳು ಸ್ವರೂಪದಿಂದಲೂ ಕಾರ್ಯದಿಂದಲೂ ಅರಿಯಲ್ಪಡುತ್ತಿರುವವೆಂದಭಿಪ್ರಾಯ. ಉದಾಹರಣೆಗೆ ಮಹಾಭೂತಗಳನ್ನು ನೋಡಿ. ಇವು ತಮ್ಮ ಕಾರ್ಯಗಳನ್ನು ಮಾಡುತ್ತಿರುವದು ನಮಗೆ ವ್ಯಕ್ತವಾಗಿಯೇ ಇರುವದು. ಇವುಗಳು ನಮಗೆ ಪ್ರತ್ಯಕ್ಷವಾಗಿಯೇ ಕಾಣುತ್ತವೆ. ಇನ್ನು ಕೆಲವು ತತ್ತ್ವಗಳು ತಮ್ಮ ಕಾರ್ಯಗಳಿಂದ ಊಹಿಸಿ ನಿಶ್ಚಯಿಸುವದಕ್ಕೆ ಯೋಗ್ಯವಾಗಿವೆ. ಇಪ್ಪತ್ತುಮೂರು ತತ್ತ್ವಗಳೆ ಪ್ರಪಂಚಕ್ಕೆ ವ್ಯಾಕೃತವೆಂದು ಹೆಸರು. ಇಂಥಿಂಥ ತತ್ತ್ವವೆಂದು ಬಿಡಿಬಿಡಿಯಾಗಿ ಇವು ಕಾಣುತವೆ.

ಇವುಗಳಿಗಿಂತ ಬೇರೆ ತತ್ತ್ವವು ಇರುವದೆಂದು ನಮಗೆ ಗೊತ್ತೇ ಇಲ್ಲ. ಹೇಗೆಂದರೆ ತತ್ತ್ವಗಳಲ್ಲೆಲ್ಲ ಸತ್ತ್ವ, ರಜಸ್ಸು, ತಮಸ್ಸು–ಈ **ಮೂರು ಗುಣಗಳು** ಕಾಣುವವು. ಸತ್ತ್ವವು ಪ್ರಕಾಶರೂಪವಾಗಿರುವದು ; ರಜಸ್ಸು ಪ್ರವೃತ್ತಿಗೆ ಕಾರಣವಾಗಿರುವದು ; ತಮಸ್ಸು ಮರೆಮಾಡುವದಕ್ಕೆ ಕಾರಣವಾಗಿರುವದು. ಪ್ರಸನ್ನವಾಗಿರುವದು, ಸಂತೋಷದಿಂದಿರುವದು, ತೃಪ್ತಿ ಸಹಿಸಿಕೊಳ್ಳುವದು, ಜ್ಞಾನ–ಇವೆಲ್ಲವೂ ಸತ್ತ್ವದ ರೂಪಗಳು. ದುಃಖ, ದ್ವೇಷ, ತಾಪ, ಖೇದ, ಭೋಗ, ಅಭಿಮಾನ– ಇವೆಲ್ಲವೂ ರಜೋಗುಣದ ರೂಪಗಳು. ಕ್ರಿಯಾರೂಪವಾಗಿರುವದೆಲ್ಲವೂ ರಜೋಗುಣವೇ. ಅಸಹ್ಯವಾಗಿರುವದು, ಮರೆಯುವದು, ನಿದ್ರೆ– ಮುಂತಾದದ್ದು ತಮಸ್ಸಿನ ರೂಪಗಳು. ಲೋಕದಲ್ಲಿ ಯಾವ ವಸ್ತುವಿನಲ್ಲಿಯಾದರೂ

ಒಳ್ಳೆಯದು, ಕೆಟ್ಟದ್ದು, ಇವೆರಡೂ ಅಲ್ಲದ್ದು- ಎಂದು ಮೂರು ಸಂಗಡಗಳುಂಟು. ಹೀಗೆ ಲೋಕದಲ್ಲಿರುವ ವಸ್ತುಗಳೆಲ್ಲವೂ ತ್ರಿಗುಣಾತ್ಮಕವಾಗಿರುವವು.

ತ್ರಿಗುಣರೂಪವಾಗಿರುವ ಜಗತ್ತಿಗೆ ತ್ರಿಗುಣಸ್ವರೂಪವಾಗಿಯೇ ಕಾರಣವಿರಬೇಕೆಂತಲೂ ಅಂಥ ಕಾರಣವೇ ಅವ್ಯಕ್ತವಾದ ಪ್ರಧಾನವೆಂತಲೂ ಸಾಂಖ್ಯರು ಹೇಳುವರು. **ಜಗತ್ತು ಈಶ್ವರನಿಂದ ಸೃಷ್ಟಿಯಾಗಿದೆ ಎಂಬುದನ್ನು ಸಾಂಖ್ಯರು ಒಪ್ಪುವದಿಲ್ಲ.**

**ಸಂಚರಃ ॥ ೬ ॥ ಪ್ರತಿಸಂಚರಃ ॥ ೭ ॥**

೬. ಸಂಚರವು ೭. ಪ್ರತಿಸಂಚರವು

ಸಂಚರ, ಪ್ರತಿಸಂಚರ- ಇವು ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ತಿಳಿಸುವವು. ಜಗತ್ತು ಹೇಗೆ ಹುಟ್ಟುವದು, ಹೇಗೆ ಲಯವಾಗುವದು- ಎಂಬುದನ್ನು ವಿಚಾರಿಸಿದರೆ ಜಗತ್ತು ಹೇಗೆ ಕಾರಣಕಾರ್ಯರೂಪವಾಗಿ ಸಂಬಂಧಿಸಿರುವದೆಂಬುದು ಗೊತ್ತಾಗುತ್ತದೆ. ಮೂಲಪ್ರಕೃತಿಯಿಂದ ಮೊದಲಾಗಿ ಮಹತ್ತು ಮೊದಲಾದವು ಹುಟ್ಟುವದೇ ಸಂಚರವು. ಹೇಗೆಂದರೆ ಸತ್ತ್ವರಜಸ್ತಮೋಗುಣಗಳು ಸಮಪ್ರಮಾಣದಿಂದ ಸೇರಿರುವದೇ ಪ್ರಧಾನವು; ಇದೇ ಅವ್ಯಕ್ತವು. ಈ ಅವ್ಯಕ್ತವಾದ ಪ್ರಧಾನದಲ್ಲಿ ಗುಣಗಳು ಏರುಪೇರಾಗಿ ಕದಡಲಾಗಿ ಮೊದಲು ಮಹತ್ತು, ಆಮೇಲೆ ಅಹಂಕಾರ, ಅದಾದಮೇಲೆ ಅಹಂಕಾರದಿಂದ ತನ್ಮಾತ್ರೆಗಳು ಮತ್ತು ಇಂದ್ರಿಯಗಳು, ತನ್ಮಾತ್ರೆಗಳಿಂದ ಭೂತಗಳು- ಹೀಗೆ ಪರಿಣಾಮವಾಗುತ್ತಾ ಹೋಗುವದು. **ಪರಿಣಾಮ**ವೆಂದರೆ ಮಾರ್ಪಾಡು. ಇದುವರೆಗೆ ವರ್ಣಿಸಿದ ಪರಿಣಾಮವೇ **ಸಂಚರವು.**

ಇದಕ್ಕೆ ವಿಪರೀತವಾದ ಕ್ರಮದಲ್ಲಿ ಹಿಂದಿನ ಪ್ರಕೃತಿಯಲ್ಲಿ ಮುಂದಿನ ವಿಕೃತಿಯು ಲಯವಾಗುವದೇ **ಪ್ರತಿಸಂಚರವು.** ಹೇಗೆಂದರೆ—ಭೂತಗಳು ತನ್ಮಾತ್ರೆಗಳಲ್ಲಿ ಲಯವಾಗುವವು. ತನ್ಮಾತ್ರೆಗಳೂ ಇಂದ್ರಿಯಗಳೂ ಅಹಂಕಾರದಲ್ಲಿ ಲಯವಾಗುವವು- ಅಹಂಕಾರವು ಬುದ್ಧಿಯಲ್ಲಿಯೂ ಬುದ್ಧಿಯು ಮೂಲ ಪ್ರಕೃತಿಯಾದ ಅವ್ಯಕ್ತರೂಪದ ಪ್ರಧಾನದಲ್ಲಿಯೂ ಸೇರುವದು.

ಒಂದೇ ಚಿನ್ನವನ್ನು ಕರಗಿಸಿ ಆದ ಗಟ್ಟಿಯು ಹೇಗೆ ಬೇರೆ ಬೇರೆಯ ರೂಪಗಳಿಂದ ಪರಿಣಮಿಸಬಹುದೋ-ಎಂದರೆ ಹೇಗೆ ಆ ಗಟ್ಟಿಯಿಂದ ಮೊದಲು ಒಂದು ಉದ್ದನೆಯ ತುಂಡು, ಆ ತುಂಡಿನಿಂದ ಒಂದು ಸಣ್ಣ ಎಳೆ, ಆ ಎಳೆಯಿಂದ ಒಂದು ಆಭರಣ- ಎಂದು ಹೇಗೆ ಬೇರೆಬೇರೆ ರೂಪಾಂತರಗಳಾಗಬಹುದೋ ಆ ಪ್ರಕಾರವೇ ಪ್ರಕೃತಿಯೂ ಮಹದಾದಿಗಳ ರೂಪದಿಂದ ಪರಿಣಮಿಸುವದು. ಮತ್ತೆ ಕರಗಿಸಿದ ಮೇಲೆ ಎಲ್ಲವೂ ಚಿನ್ನವೇ ಆಗಿ ಅದರಲ್ಲಿ ಅಡಗಿಬಿಡುವಂತೆ ತತ್ತ್ವಗಳೆಲ್ಲವೂ ಪ್ರಕೃತಿಯಲ್ಲಿಯೇ ಅಡಗಿಕೊಳ್ಳುವವು.

## ಅಧ್ಯಾತ್ಮಮಧಿಭೂತಮಧಿದೈವತಂ ಚ ॥ ೮ ॥

೮. **ಅಧ್ಯಾತ್ಮವು,** ಆಧಿಭೂತವು ಮತ್ತು ಅಧಿದೈವತವು

ಒಂದು ಬಗೆಯಿಂದ ನೋಡಿದರೆ ಜಗತ್ತೆಲ್ಲವೂ ಮೂರು ರಾಶಿಯಾಗಿ ಕಾಣುವದು. ಹೇಗೆಂದರೆ ಬುದ್ಧಿ, ಅಹಂಕಾರ, ಮನಸ್ಸು, ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು- ಇವು ಅಧ್ಯಾತ್ಮವು (ಎಂದರೆ ನಮ್ಮ ಶರೀರದ ಒಳಗೆ ಇರುವದು). ಇವುಗಳಿಗೆ ವಿಷಯವಾಗಿರುವದೇ ಅಧಿಭೂತವು. ಹೇಗೆಂದರೆ ಯಾವದರಲ್ಲಿ ಅಭಿಮಾನವಿಡುತ್ತೇವೋ ಅದೇ ಅಹಂಕಾರಕ್ಕೆ ವಿಷಯವು. ಯಾವದನ್ನು ಸಂಕಲ್ಪಿಸುತ್ತೇವೋ ಅದೇ ಮನಸ್ಸಿಗೆ ವಿಷಯವು.

ಯಾವದನ್ನು ಕೇಳುತ್ತೇವೋ ಅದೇ ಕಿವಿಗೆ ವಿಷಯವು. ಹೀಗೆಯೇ ಮಿಕ್ಕ ವಿಷಯಗಳನ್ನೂ ತಿಳಿಯಬೇಕು. ಇಂಥ ವಿಷಯಗಳಿಗೆ **ಅಧಿಭೂತ**ವೆಂದು ಹೆಸರು. ಶಬ್ದ, ಸ್ಪರ್ಶ, ರೂಪ, ರಸ, ಗಂಧ- ಇವುಗಳು ಜ್ಞಾನೇಂದ್ರಿಯದ ವಿಷಯಗಳು ; ಮಾತು, ತೆಗೆದುಕೊಳ್ಳಲ್ಪಡುವದು, ನಡೆಯಲ್ಪಡತಕ್ಕದ್ದು, ವಿಸರ್ಜಿಸಲ್ಪಡತಕ್ಕದ್ದು, ಆನಂದಪಡತಕ್ಕದ್ದು- ಇವುಗಳು ಕರ್ಮೇಂದ್ರಿಯಗಳ ವಿಷಯಗಳು. ಬುದ್ಧಿ, ಅಹಂಕಾರ, ಮನಸ್ಸು- ಇವುಗಳಿಗೆ ಕ್ರಮವಾಗಿ ಬ್ರಹ್ಮ, ರುದ್ರ, ಚಂದ್ರ- ಇವರು ದೇವತೆಗಳು ; ಜ್ಞಾನೇಂದ್ರಿಯಗಳಿಗೆ ಆಕಾಶ, ವಾಯು, ಸೂರ್ಯ, ವರುಣ, ಪೃಥಿವಿ- ಇವರು ದೇವತೆಗಳು ; ಕರ್ಮೇಂದ್ರಿಯಗಳಿಗೆ ಅಗ್ನಿ, ಇಂದ್ರ, ವಿಷ್ಣು, ಮಿತ್ರ, ಪ್ರಜಾಪತಿ- ಇವರು ದೇವತೆಗಳು.

ಹೀಗೆ ಶರೀರವೆಂಬ ಕಾರ್ಯಕರಣಗಳ ಗುಂಪಿನಲ್ಲಿದ್ದುಕೊಂಡು ಕೆಲಸಮಾಡುತ್ತಿರುವ ಬುದ್ಧಿ ಮೊದಲಾದ ಹದಿಮೂರು ಪದಾರ್ಥಗಳಿಗೆ **ಅಧ್ಯಾತ್ಮ**ವೆಂದು ಹೆಸರು ; ಇವುಗಳಿಗೆ ವಿಷಯವಾಗಿರುವ ಭೂತಗಳಲ್ಲಿರುವ ಹದಿಮೂರು ಪದಾರ್ಥಗಳಿಗೆ **ಅಧಿಭೂತ**ವೆಂದು ಹೆಸರು. ದೇವತೆಗಳಾಗಿದ್ದುಕೊಂಡು ಆಯಾ ವಿಷಯಗಳನ್ನು ಆಯಾ ಕರಣಗಳಿಗೆ ಪ್ರಕಾಶವಾಗುವಂತೆ ಮಾಡುವ ಹದಿಮೂರಕ್ಕೆ **ಅಧಿದೈವತ**ವೆಂದು ಹೆಸರು. ಉದಾಹರಣೆಗೆ, ಕಣ್ಣು ಎಂಬ ಇಂದ್ರಿಯವು ಅಧ್ಯಾತ್ಮವು ; ಇದಕ್ಕೆ ವಿಷಯವಾಗಿರುವ ರೂಪವು ತೇಜಸ್ಸು- ಎಂಬ ಭೂತದಲ್ಲಿರುವದಾದ್ದರಿಂದ ಇದು ಅಧಿಭೂತವು ; ಕಣ್ಣಿಗೆ ರೂಪವು ಗೋಚರಿಸುವಂತೆ ಮಾಡಿಕೊಡುವ ಸೂರ್ಯನೇ ಅಧಿದೇವತೆ.

ಈ ರೀತಿಯಾಗಿ ಜಗತ್ತೆಲ್ಲ ಮೂರು ರಾಶಿಯಾಗಿರುವದೆಂದು ತಿಳಿಯುವದರ ಫಲವೇನೆಂದರೆ–ಈ ವಿಷಯದಲ್ಲಿ **ಪಂಚಶಿಖರೆಂಬ** ಸಾಂಖ್ಯಾಚಾರ್ಯರ ವಚನವೊಂದುಂಟು :–

**ತತ್ತ್ವಾನಿ ಯೋ ವೇದಯತೇ ಯಥಾವ-**
**ದ್ಗುಣಸ್ವರೂಪಾಣ್ಯಧಿದೈವತಂ ಚ ।**
**ವಿಮುಕ್ತಪಾಪ್ಮಾ ಗತದೋಷಸಙ್ಗೋ**
**ಗುಣಾಂಸ್ತು ಭುಙ್ಕ್ತೇ ನ ಗುಣೈಃ ಸ ಭುಜ್ಯತೇ ॥**

ತತ್ತ್ವಗಳು ಇಪ್ಪತ್ತೈದು, ಗುಣಗಳು ಮೂರು, ಬ್ರಹ್ಮ, ರುದ್ರ– ಮುಂತಾದ ಅಧಿದೈವತಗಳು ಹದಿಮೂರು– ಇವುಗಳನ್ನು ಇದ್ದವು ಇದ್ದಂತೆ ತಿಳಿಯುವಾತನಿಗೆ ಯಾವ ಪಾಪವೂ ಇರುವದಿಲ್ಲ. ಅವನಿಗೆ ದೋಷಗಳ ಸಂಬಂಧವೇ ಇರುವದಿಲ್ಲ. ಗುಣಗಳನ್ನು ತಾನು ಭೋಗಿಸುವನೇ ಹೊರತು ಗುಣಗಳು ಇವನನ್ನು ಭೋಗಿಸುವದಿಲ್ಲ. ಸತ್ತ್ವರಜಸ್ತಮೋಗುಣಗಳೇ ಅಧ್ಯಾತ್ಮವೇ ಮುಂತಾದ ಮೂರು ರಾಶಿಗಳಾಗಿರುವದರಿಂದಲೂ ಅವುಗಳ ಪರಿಣಾಮದಿಂದ ಸುಖದುಃಖಗಳು ಆಗುತ್ತಿರುವದರಿಂದಲೂ ಆ ಸುಖದುಃಖಗಳು ತೋರುತ್ತಿರುವ ಇಂದ್ರಿಯ, ಮನಸ್ಸು, ಬುದ್ಧಿ– ಇವುಗಳುಕೂಡ ಮೂರು ಗುಣಗಳೇ ಆಗಿರುವದರಿಂದಲೂ, ಗುಣಗಳಿಗಿಂತ ಬೇರೆಯಾಗಿರುವ ಪುರುಷನಾದ ತನಗೇನೂ ಸಂಬಂಧವಿಲ್ಲವೆಂದು ತಿಳಿದವನು ನಿಸ್ಸಂಗನಾಗಿರುವನು. ಹಾಗೆ ತಿಳಿಯದೆ ಇರುವ ಅವಿವೇಕಿಯನ್ನು ಗುಣಗಳೇ ಭೋಗಿಸುವವು, ಎಂದರೆ ಅವು ಎಲ್ಲಾ ಸುಖದುಃಖಗಳನ್ನೂ ಇವನ ಮೇಲೆಯೇ ಹೊರಿಸುತ್ತವೆ. ಹೀಗೆಂಬುದು ಮೇಲೆ ಕೊಟ್ಟಿರುವ ಶ್ಲೋಕದ ಅಭಿಪ್ರಾಯವು.

## ಪಂಚಾಭಿಬುದ್ಧಯಃ ॥ ೯ ॥

### ೯. ಐದು ಅಭಿಬುದ್ಧಿಗಳು

ವಿಷಯಕ್ಕೆ ಅಭಿಮುಖವಾಗಿರುವ ಬುದ್ಧಿಯೇ '**ಅಭಿಬುದ್ಧಿ**' ಎನಿಸುವದು. ನಿಶ್ಚಯವು, ಅಭಿಮಾನವು, ಇಚ್ಛೆಯು, ಪ್ರಯತ್ನವು, ಕ್ರಿಯೆ- ಇವು ಐದೂ ಅಭಿಬುದ್ಧಿಗಳು. ವಿಷಯಕ್ಕೆ ನಾವು ಎರಗುವದಕ್ಕೆ ಇವೇ ಕಾರಣವು. ಒಂದು ಉದಾಹರಣೆಯಿಂದ ಇದು ಸ್ಪಷ್ಟವಾಗುವದು. ಒಂದು ಶಬ್ದವನ್ನು ಕೇಳಿ ಇದು ಸಂಗೀತವು ಎಂದು ಮೊದಲು ನಿಶ್ಚಯಿಸುತ್ತಾನೆ. ಆಮೇಲೆ 'ನಾನು ಈ ಶಬ್ದವನ್ನು ಕೇಳಬೇಕು' ಎಂದು ತನಗೂ ಸಂಗೀತಕ್ಕೂ ಸಂಬಂಧ ವನ್ನು ಕಲ್ಪಿಸಿಕೊಳ್ಳುತ್ತಾನೆ. ಹೀಗೆ ನಾನು ಎಂಬ ಜ್ಞಾನವು ಎದ್ದಮೇಲಿ "ಇದನ್ನು ಕೇಳಬೇಕಲ್ಲ!" ಎಂದು ತವಕಿಸುತ್ತಾನೆ. ಆಮೇಲೆ ಕಿವಿಗೊಟ್ಟು ಆಲೈಸುತ್ತಾನೆ. ಆಗ ಶಬ್ದದ ಜ್ಞಾನ ವಾಗುವದು. ಹೀಗೆ ಒಂದೊಂದು ವಿಷಯದ ಜ್ಞಾನವಾಗುವ ಮುಂಚೆಯೇ ವಿಷಯದ **ಸ್ವರೂಪನಿಶ್ಚಯ, ವಿಷಯಾಭಿಮಾನ, ವಿಷಯೇಚ್ಛೆ,** ವಿಷಯಜ್ಞಾನಕ್ಕಾಗಿ **ಪ್ರಯತ್ನ**- ಈ ನಾಲ್ಕು ಅಭಿಬುದ್ಧಿಗಳು ಮನಸ್ಸಿನಲ್ಲಿಯೇ ನಡೆದಿರುತ್ತವೆ. ಐದನೆಯದೇ ಆಯಾ ವಿಷಯವನ್ನು ತಿಳಿಯುವ ಜ್ಞಾನದ ಕ್ರಿಯೆಯು.

## ಪಞ್ಚ ಕರ್ಮಯೋನಯಃ ॥ ೧೦ ॥

### ೧೦. ಐದು ಕರ್ಮಯೋನಿಗಳು

ಧೃತಿ, ಸುಖೇಚ್ಛೆ, ಶ್ರದ್ಧೆ, ಅವಿವಿದಿಷೆ, ವಿವಿದಿಷೆ- ಇವು ಕರ್ಮಯೋನಿಗಳು. ಯೋನಿ ಎಂದರೆ ಕಾರಣ. ಇವುಗಳಿಂದಲೇ ಕರ್ಮವಾಗುವದರಿಂದ ಇವಕ್ಕೆ **ಕರ್ಮಯೋನಿ**ಗಳೆಂದು ಹೆಸರು.

ಧೃತಿಯೆಂದರೆ ಮನೋವಾಕ್ಕಾಯಗಳಲ್ಲಿ ಒಂದೇ ಪಟ್ಟು ಹಿಡಿದಿರುವದು. ಇದು ಹೀಗೆಯೇ ಆಗಬೇಕೆಂದು ಯೋಚಿಸಿ ಅದರಂತೆ ಆಡುವದು ಮತ್ತು ಮಾಡುವದು- **ಧೃತಿ**ಯೆನಿಸುವದು. ಒಳ್ಳೆಯ ಧೃತಿಯಿಂದ ಒಳ್ಳೆಯ ಕೆಲಸವೂ ಕೆಟ್ಟ ಧೃತಿಯಿಂದ ಕೆಟ್ಟ ಕೆಲಸವೂ ಹುಟ್ಟುತ್ತಿರುವದು. ಸುಖೇಚ್ಛೆ, ಶ್ರದ್ಧೆ- ಇವು ಗಳೆರಡೂ ಕರ್ಮಕ್ಕೆ ಕಾರಣವೇ. ವೇದವನ್ನು ಅಧ್ಯಯನಮಾಡು ವದು, ಅಥವಾ ಅಧ್ಯಯನಮಾಡಿಸುವದು, ಯಾಗಾದಿಗಳನ್ನು ಮಾಡುವದು, ಮಾಡಿಸುವದು, ದಾನಗಳನ್ನು ಮಾಡುವದು, ದಾನ ಗಳನ್ನು ತೆಗೆದುಕೊಳ್ಳುವದು-ಈ ಕಾರ್ಯಗಳನ್ನು ತನ್ನ ಸ್ವಾರ್ಥತೆ ಯಿಂದ ಮಾಡುವಲ್ಲಿ **ಸುಖೇಚ್ಛೆ**ಯು ಕಾರಣ ; ಸ್ವಾರ್ಥವನ್ನು ಗಣನೆಗೆ ತರದೆ ಈ ಕರ್ಮಗಳನ್ನು ಮಾಡುವಲ್ಲಿ **ಶ್ರದ್ಧೆ**ಯು ಕಾರಣ. ವೇದೋಕ್ತಕರ್ಮವೇ ಅಲ್ಲ; ಸ್ವಾರ್ಥತೆಯಿಂದ ಮಾಡುವ ಕರ್ಮ ಕ್ಕೆಲ್ಲ ಸುಖೇಚ್ಛೆಯೇ ಮೂಲ. ಕರ್ತವ್ಯಕ್ಕಾಗಿ ಕರ್ತವ್ಯವನ್ನು ಮಾಡುವದಕ್ಕೆ ಕರ್ಮಶ್ರದ್ಧೆಯೇ ಮೂಲ. **ಅವಿವಿದಿಷೆ**ಯೆಂದರೆ ತತ್ತ್ವವನ್ನು ತಿಳಿಯಬೇಕೆಂಬ ಕುತೂಹಲವಿಲ್ಲದೆ ಔದಾಸೀನ್ಯ ದಿಂದಿರುವದು. ಇದೂ ಯಾವದಾದರೊಂದು ಕರ್ಮಕ್ಕೆ ಕಾರಣ ವೇ. ಇದರಿಂದ ವಿವಿದಿಷೆಗೆ ಅಡ್ಡಿಯಾಗಿರುತ್ತದೆ. ಇನ್ನು ಪ್ರಕೃತಿಪುರುಷರು ಒಂದೊ, ಅನೇಕವೊ? ನಿತ್ಯವೊ, ಅನಿತ್ಯವೊ? ಚೇತನವೊ, ಜಡವೊ? ಸೂಕ್ಷ್ಮವೊ, ಸ್ಥೂಲವೊ? -ಎಂದು ಮೊದಲಾಗಿ ತಿಳಿಯಲೆಳಸುವದೇ **ವಿವಿದಿಷೆ**ಯು. ವಿವಿದಿಷೆಯು ಶುಭಕರ್ಮಕ್ಕೆ ಕಾರಣವು. ಇದರಿಂದಲೇ ಮೋಕ್ಷವಾಗುವದು. ಮಿಕ್ಕ ನಾಲ್ಕು ಕರ್ಮಯೋನಿಗಳೂ ಬಂಧಕ್ಕೆ ಕಾರಣವಾಗಿವೆ.

# ಪಂಚ ವಾಯವಃ ॥ ೧೧ ॥

## ೧೧. ಐದು ವಾಯುಗಳು

ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ– ಇವು ಐದು ವಾಯುಗಳು. ಇಲ್ಲಿ, ವಾಯುವೆಂದರೆ ಗಾಳಿಯೆಂದಾಗಲಿ, ಉಸಿರೆಂದಾಗಲಿ ಅರ್ಥವಲ್ಲ ; ಕ್ರಿಯಾಶಕ್ತಿಯಿಂದ ಕೂಡಿದ ಪ್ರಾಣವೃತ್ತಿಗಳೇ **ವಾಯುಗಳು.** ವಾಯು ಹಿಂದಕ್ಕೆ, ಮುಂದಕ್ಕೆ, ಮೇಲಕ್ಕೆ, ಕೆಳಕ್ಕೆ– ಬೀಸುತಾ ಚಲಿಸುತ್ತಿರುವಂತೆ ಈ ವಾಯುಗಳು ಪ್ರವಹಿಸುತ್ತಿರುವವು. ಇದಲ್ಲದೆ ಪ್ರಾಣಗಳಿಗೆ ವಾಯುವೇ ಅಭಿಮಾನದೇವತೆಯಂತೆ. ಆದ್ದರಿಂದಲೂ ಇವುಗಳಿಗೆ ವಾಯುವೆಂಬ ಹೆಸರು ಬಂದಿರುವದು. 'ಪ್ರಾಣ'ವೆಂದರೆ ಬಲವಾಗಿ ನಡೆಯುವದು ಮುಂತಾದ ಕೆಲಸಗಳನ್ನು ನಡೆಸುವ ಶಕ್ತಿಯು ; ಅಪಾನವೆಂದರೆ ಕೆಳಗಡೆ ಚಲಿಸುವ ಶಕ್ತಿಯು ; ಉಂಡ ಅನ್ನವೇ ಮುಂತಾದದ್ದನ್ನು ಅತ್ತಿತ್ತ ತಳ್ಳುವ ಶಕ್ತಿಯೇ ವ್ಯಾನವು. ಮೇಲಕ್ಕೆ ಬರುವ ವಾಂತಿ ಮುಂತಾದವುಗಳಿಗೆ ಅವಕಾಶವನ್ನುಂಟುಮಾಡುವ ಶಕ್ತಿಯೇ ಉದಾನವು ; ಉಂಡ ಪದಾರ್ಥವನ್ನು ಎಲ್ಲ ಕಡೆಗೂ ಸಮವಾಗಿ ಹಂಚುವ ಶಕ್ತಿಯೇ ಸಮಾನವು. ಇಲ್ಲಿ ಮುಖ್ಯವಾಗಿ ತಿಳಿಯಬೇಕಾದದ್ದು ಇಷ್ಟೆ : ನಮ್ಮ ಶರೀರದಲ್ಲಿ ನಾನಾಬಗೆಯಾದ ಕ್ರಿಯೆಗಳು ನಡೆಯುವವಷ್ಟೆ ; ಅವುಗಳನ್ನು ಕ್ರಿಯಾಸಾಮಾನ್ಯ, ಮೇಲುಗಡೆ ನಡೆಯುವ ಕ್ರಿಯೆ, ಕೆಳಗಡೆ ನಡೆಯುವ ಕ್ರಿಯೆ, ದಿಕ್ಕುದಿಕ್ಕಿಗೆ ಚದರಿಸುವ ಕ್ರಿಯೆ, ಶರೀರದಲ್ಲೆಲ್ಲ ಸಮತೂಕವಾಗಿ ಸಾಗಿಸುವ ಕ್ರಿಯೆ– ಎಂದು ಐದು ವಿಧವಾಗಿ ವಿಂಗಡಿಸಬಹುದು. ಇವುಗಳೆಲ್ಲ ವಾಯುಗಳೇ. ಇವುಗಳನ್ನು **ಪ್ರಾಣ**ಗಳೆಂದೂ ಕರೆಯುವರು.

# ಪಂಚ ಕರ್ಮಾತ್ಮಾನಃ ॥ ೧೨

## ೧೨. ಐದು ಕರ್ಮಾತ್ಮಗಳು

ಕರ್ಮಾತ್ಮನೆಂದರೆ ಕರ್ಮವನ್ನು ಮಾಡುವವನು. ವೈಕಾರಿಕ, ತೈಜಸ, ಭೂತಾದಿ ಸಾನುಮಾನ, ನಿರನುಮಾನ- ಎಂದು ಕರ್ಮಾತ್ಮನಲ್ಲಿ ಐದು ಬಗೆ.

ಅಹಂಕಾರವೇ ನಿಜವಾಗಿ ಕರ್ಮಕ್ಕೆ ಮೂಲವು. ಆಯಾ ಕೆಲಸಕ್ಕೆ ಹಿಂದೆ ಹೇಳಿದ ಧೃತಿಯೇ ಮುಂತಾದವು ಕಾರಣವಾಗುವವೆಂಬುದು ನಿಜ. ಆದರೆ ಎಂಥ ಕರ್ಮಕ್ಕಾದರೂ 'ನಾನು ಕರ್ತೃ' ಎಂಬ ಅಭಿಮಾನವಿರಲೇಬೇಕು. ಇಂಥ ಅಹಂಕಾರವು ಐದು ಬಗೆ. **ವೈಕಾರಿಕ**ವೆಂದರೆ ಸಾತ್ತ್ವಿಕಾಹಂಕಾರವು ; ಇದರಿಂದ ಶುಭಕರ್ಮಗಳು ಆಗುವವು. **ತೈಜಸ**ವು ರಾಜಸಾಹಂಕಾರವು ; ಇದರಿಂದ ಕೆಟ್ಟ ಕರ್ಮಗಳು ಆಗುವವು. **ಭೂತಾದಿ**ಯೆಂಬುದು ತಾಮಸಾಹಂಕಾರವು ; ಇದರಿಂದ ಮೂಢಕರ್ಮಗಳು ಆಗುವವು. ಇದು ಇಂಥ ಕರ್ಮವೆಂಬ ಜ್ಞಾನವಿಲ್ಲದೆ ಮೋಹದಿಂದ ಮಾಡುವ ಕೆಲಸವೇ ಭೂತಾದಿಯೆಂಬ ಅಹಂಕಾರದಿಂದ ನಡೆಯತಕ್ಕದ್ದು.

ಈ ತಾಮಸಕರ್ಮಗಳುಕೂಡ ಒಳ್ಳೆಯವೆಂದೂ ಕೆಟ್ಟವೆಂದೂ ಎರಡು ಬಗೆಯಾಗಿ ಇದ್ದೇ ಇರುವವಷ್ಟೆ? ಒಳ್ಳೆಯ ತಾಮಸಕರ್ಮಗಳಿಗೆ ಕಾರಣವಾದ ಅಹಂಕಾರಕ್ಕೆ **ಸಾನುಮಾನಾ**ಹಂಕಾರವೆಂದು ಹೆಸರು. ಕೆಟ್ಟವುಗಳಿಗೆ ಕಾರಣವಾದದ್ದಕ್ಕೆ **ನಿರನುಮಾನ**ವೆಂದು ಹೆಸರು. ತಾಮಸಕರ್ಮಸಾಮಾನ್ಯಕ್ಕೆ ಕಾರಣವಾಗಿರುವ ಅಹಂಕಾರವು **ಭೂತಾದಿ.** ಹೀಗೆ ಭೂತಾದಿಯಲ್ಲಿಯೇ ಸಾನುಮಾನನಿರನುಮಾನಗಳು ಸೇರಿರುವದರಿಂದ

ಕರ್ಮಾತ್ಮರು ಮೂರೇ ಬಗೆಯವರಾಗುವರು. ಇದು ವ್ಯಾಖ್ಯಾನಗಳನ್ನನುಸರಿಸಿ ಹೇಳಿದ್ದಾಗಿದೆ. ಕರ್ಮಾತ್ಮನು ಸ್ವತಂತ್ರನಾಗಿಯೇ ಐದು ವಿಧವೆಂದು ಸೂತ್ರದಲ್ಲಿ ಹೇಳಿರುವಂತೆ ತೋರುವದು. ವ್ಯಾಖ್ಯಾನಗಳಿಗೂ ಸೂತ್ರಕ್ಕೂ ಈ ಭೇದವಿರುವದಕ್ಕೆ ಕಾರಣವೇನೋ ತಿಳಿಯದು.

## ಪಂಚಪರ್ವಾ ಅವಿದ್ಯಾ ||೧೩||

### ೧೩. ಐದು ಕವಲುಗಳ ಅವಿದ್ಯೆ

ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ ಇವು ಐದೂ ಅವಿದ್ಯೆಯ ಕವಲುಗಳು.

ಎಂಟು ವಿಧವಾದ ಪ್ರಕೃತಿಗಳನ್ನು ಹಿಂದೆ (೨ನೆಯ ಸೂತ್ರದಲ್ಲಿ) ತಿಳಿಸಿದ್ದೇವಷ್ಟೆ? ಅವುಗಳಿಗೂ ತನಗೂ ಭೇದವನ್ನು ಅರಿಯದೆ ಪ್ರಧಾನಬುದ್ಧಿತನ್ಮಾತ್ರೆಗಳೇ ತಾನೆಂದು ಅರಿಯುವದು **ತಮಸ್ಸು;** ಎಂಟು ವಿಧವಾದ ಅಣಿಮಾ ಮುಂತಾದವುಗಳನ್ನು ಪಡೆಯುವದೇ ಪುರುಷಾರ್ಥವೆಂದು ತಿಳಿಯುವದು **ಮೋಹವು;** ಉತ್ಕೃಷ್ಟವಾದ ಶಬ್ದಸ್ಪರ್ಶರೂಪರಸಗಂಧಗಳನ್ನು ಪಡೆಯುವದೇ ಪುರುಷಾರ್ಥವೆಂದರಿಯುವದು **ಮಹಾಮೋಹವು;** ಎಂಟು ಬಗೆಯ ಅಣಿಮಾದ್ಯೈಶ್ವರ್ಯವಾಗಲಿ, ವಿಷಯಗಳಾಗಲಿ ದಕ್ಕದೆ ಆಗುವ ದುಃಖವು **ತಾಮಿಸ್ರವೆನಿಸುವದು;** ಇವುಗಳನ್ನು ಪಡೆದರೆ ಆಮೇಲೆ ಎಲ್ಲಿ ಕ್ಷಯವಾಗುವದೊ! - ಎಂದು ಚಿಂತಿಸುವದು **ಅಂಧತಾಮಿಸ್ರ.** ಹೀಗೆ ಅವಿವೇಕರೂಪವಾದ ಅವಿದ್ಯೆಗೆ ಐದು ಕವಲುಗಳುಂಟು.

## ಅಷ್ಟಾವಿಂಶತಿಧಾಽಶಕ್ತಿ ॥೧೪॥

### ೧೪. ಇಪ್ಪತ್ತೆಂಟು ಬಗೆಯಾಗಿರುವ ಅಶಕ್ತಿಯು

ಅಶಕ್ತಿಯು ಇಪ್ಪತ್ತೆಂಟು ಬಗೆಯಾಗಿರುವದು. ಇವುಗಳಲ್ಲಿ ಹನ್ನೊಂದು ಇಂದ್ರಿಯದೋಷಗಳು; ಉಳಿದ ಹದಿನೇಳೂ ಬುದ್ಧಿಯ ದೋಷಗಳು.

ಕಿವಿಯಲ್ಲಿ ಕಿವುಡು, ಚರ್ಮದಲ್ಲಿ ತೊನ್ನು, ಕಣ್ಣಿನಲ್ಲಿ ಕುರುಡು, ನಾಲಗೆಯಲ್ಲಿ ಸವಿತಿಳಿಯದೆ ಇರುವದು, ಮೂಗಿನಲ್ಲಿ ವಾಸನೆಯರಿಯದೆ ಇರುವದು, ಮಾತಿನಲ್ಲಿ ಮೂಕತ್ವ, ಕೈಯಲ್ಲಿ ಮೋಟು, ಕಾಲಿನಲ್ಲಿ ಹೆಳವು, ಪಾಯುವಿನಲ್ಲಿ ಮಲಬದ್ಧವಾಗುವದು, ಜನನೇಂದ್ರಿಯದಲ್ಲಿ ನಪುಂಸಕತ್ವ, ಮನಸ್ಸಿನಲ್ಲಿ ಹುಚು– ಇವು ಹನ್ನೊಂದೂ **ಇಂದ್ರಿಯದೋಷಗಳು.**

ಹದಿನೇಳು ಬುದ್ಧಿಯ ದೋಷಗಳೆಂದು ಮೇಲೆ ತಿಳಿಸಿದೆಯಷ್ಟೆ. ಇವುಗಳು ಅತುಷ್ಟಿಗಳೆಂತಲೂ ಅಸಿದ್ಧಿಗಳೆಂತಲೂ ಎರಡು ಪಂಗಡ. ಇವುಗಳ ಸ್ವರೂಪವನ್ನು ತಿಳಿಯುವದಕ್ಕೆ ತುಷ್ಟಿ, ಸಿದ್ಧಿ– ಇವುಗಳನ್ನು ತಿಳಿಯುವದು ಅವಶ್ಯಕವಾಗಿರುವದರಿಂದ ಮುಂದಿನ ಎರಡು ಸೂತ್ರಗಳಲ್ಲಿ ತುಷ್ಟಿಗಳನ್ನೂ ಸಿದ್ಧಿಗಳನ್ನೂ ತಿಳಿಸಿರುತ್ತದೆ.

## ನವಧಾ ತುಷ್ಟಿಃ ॥೧೫॥

### ೧೫. ಒಂಬತ್ತು ಬಗೆಯ ತುಷ್ಟಿ

ಈ ಸೂತ್ರದಲ್ಲಿ ಒಂಬತ್ತು ತುಷ್ಟಿಗಳನ್ನು ತಿಳಿಸಿರುತ್ತದೆ. ತುಷ್ಟಿಗಳನ್ನು ಆಧ್ಯಾತ್ಮಿಕ, ಆಧಿಭೌತಿಕ– ಎಂದು ಎರಡು ಪಂಗಡವಾಗಿ ವಿಂಗಡಿಸಬಹುದು.

ಇವುಗಳಲ್ಲಿ ಆಧ್ಯಾತ್ಮಿಕತುಷ್ಟಿಗಳು ನಾಲ್ಕು ಎಂದು ಎಲ್ಲಾ ಸಾಂಖ್ಯರೂ ಹೇಳಿರುತ್ತಾರೆ. ಆದರೆ ಅವು ಯಾವವು ಎಂಬ ವಿಷಯದಲ್ಲಿ ಮತಭೇದವುಂಟು. ಪ್ರಧಾನ, ಬುದ್ಧಿ, ಅಹಂಕಾರ, ತನ್ಮಾತ್ರೆಗಳು- ಇವುಗಳೆಲ್ಲ ಸೂಕ್ಷ್ಮತತ್ತ್ವಗಳಷ್ಟೆ? ವಿಚಾರದೃಷ್ಟಿಯನ್ನು ಪೂರ ಹಾಯಿಸದೆ ಇರುವವರಿಗೆ ತನ್ಮಾತ್ರೆಯೇ ಕೊನೆಯ ತತ್ತ್ವವೆಂದು ತೋರಬಹುದು. ಇನ್ನೂ ಸ್ವಲ್ಪ ಮುಂದೆ ವಿಚಾರಿಸಿದವರಿಗೆ ಅಹಂಕಾರವೇ ಕೊನೆಯ ತತ್ತ್ವವೆಂದು ತೋರಬಹುದು ಹೀಗೆ ಮುಂದುಮುಂದಕ್ಕೆ ವಿಚಾರಿಸದೆ ತಾನುತಾನು ತಿಳಿದದ್ದೇ ಕೊನೆಯ ತತ್ತ್ವವೆಂದು ನಿಶ್ಚಯಿಸಿಬಿಟ್ಟರೆ ನಿಜವು ಗೊತ್ತಾಗದೆಯೇ ಹೋಗಿಬಿಡುವದು. ತನ್ಮಾತ್ರೆಗಳಿಂದ ಪ್ರಧಾನದವರೆಗೆ ನಾಲ್ಕು ತತ್ತ್ವಗಳಿರುವವರಿಂದ ಇವುಗಳೇ ಕೊನೆಯೆಂದು ನೆಚ್ಚಿ ವಿಚಾರ ಮಾಡದೆ ಕೂತುಕೊಳ್ಳಬಹುದಾದ ಸ್ಥಾನಗಳೂ ನಾಲ್ಕು. ಇವೇ ನಾಲ್ಕು ಬಗೆಯ ಆಧ್ಯಾತ್ಮಿಕತುಷ್ಟಿ. ಹೀಗೆಂಬುದು ಸಾಂಖ್ಯರಲ್ಲಿ ಕೆಲವರ ಅಭಿಪ್ರಾಯ.

ಮತ್ತೆ ಕೆಲವರು ಶಾಸ್ತ್ರಕಾರರು ಹೀಗೆಂದು ಹೇಳುವರು: ಪ್ರಕೃತಿಯು ಎಲ್ಲಾ ಬಗೆಯಾಗಿಯೂ ಪರಿಣಮಿಸುತ್ತಿರುವದರಿಂದ ಅದೇ ಜ್ಞಾನವನ್ನುಂಟುಮಾಡುತ್ತದೆ ; ನಾವೇಕೆ ಪ್ರಯತ್ನಮಾಡಬೇಕು ?- ಎಂದು ಕುಳಿತುಕೊಳ್ಳುವದು ಒಂದು. ಸಂನ್ಯಾಸವನ್ನು ತೆಗೆದುಕೊಂಡಮಾತ್ರದಿಂದ ಜ್ಞಾನವಾಗುವದೆಂದು ತಿಳಿಯುವದು ಮತ್ತೊಂದು. ಕಾಲ ಬಂದ ಹೊರತು ಜ್ಞಾನವು ಬರುವದಿಲ್ಲ- ಎಂದು ಕಾಲವನ್ನು ನಿರೀಕ್ಷಿಸುತ್ತಿರುವದು ಇನ್ನೊಂದು. ಮುಖ್ಯವಾಗಿ ಯಾವದಕ್ಕೂ ಅದೃಷ್ಟ ಬೇಕು, ಭಾಗ್ಯಹೀನರಿಗೆ ಜ್ಞಾನವಾಗಲಾರದು- ಎಂದು ಅದೃಷ್ಟವನ್ನು ನಂಬಿರುವದು ನಾಲ್ಕನೆ

ಯದು. ಹೀಗೆ ಒಟ್ಟಿಗೆ ನಾಲ್ಕು ತುಷ್ಟಿಗಳು. ಇವೇ ಆಧ್ಯಾತ್ಮಿಕ ತುಷ್ಟಿಗಳು ಎಂಬುದು ಈ ಎರಡನೆಯ ಪಂಗಡದ ಸಾಂಖ್ಯರ ಮತವು.

ಇನ್ನು ಹೊರಗಿನ ಸಂಬಂಧವಾದವು ಐದು ತುಷ್ಟಿಗಳು ಇರುತ್ತವೆ. ವಿಷಯಗಳಲ್ಲಿ ದೋಷವನ್ನು ಕಾಣುವದೇ ಕೊನೆಯ ಸ್ಥಿತಿಯೆಂದು ತಿಳಿಯುವದು, ವಿಷಯಗಳನ್ನು ಕಾಪಾಡಿಕೊಳ್ಳುವದರಲ್ಲಿ ದೋಷವನ್ನು ತಿಳಿದಮಾತ್ರದಿಂದ ತೃಪ್ತನಾಗುವದು, ವಿಷಯಗಳು ನಾಶವಾಗುವದರಿಂದ ಅವುಗಳಲ್ಲಿ ದೋಷವನ್ನು ತಿಳಿದು ತೃಪ್ತನಾಗುವದು, ವಿಷಯಗಳಲ್ಲಿ ಆಸಕ್ತಿಯಿರಬಾರದೆಂದು ತಿಳಿದಮಾತ್ರದಿಂದ ತೃಪ್ತಿಹೊಂದುವದು, ವಿಷಯಗಳಿಗೋಸ್ಕರ ಮತ್ತೊಬ್ಬರಿಗೆ ಹಿಂಸಾದಿಗಳನ್ನು ಮಾಡದಿರುವದೇ ಮುಖ್ಯವಾದ ಉದ್ದೇಶವೆಂದು ತಿಳಿಯುವದು– ಇವು ಐದೂ ಬಾಹ್ಯತುಷ್ಟಿಗಳು. ಹೀಗೆ ನಾಲ್ಕು ಆಧ್ಯಾತ್ಮಿಕ, ಐದು ಬಾಹ್ಯ– ಇವೆರಡೂ ಸೇರಿ ಒಂಬತ್ತು ತುಷ್ಟಿಗಳಾದವು.

ಇವುಗಳಿಗೆ ವಿರುದ್ಧವಾದವುಗಳೇ **ಅತುಷ್ಟಿ**ಗಳು. ಹೇಗೆಂದರೆ ಪ್ರಧಾನವಿಲ್ಲ, ಬುದ್ಧಿಯಿಲ್ಲ, ಅಹಂಕಾರವಿಲ್ಲ, ತನ್ಮಾತ್ರೆಗಳಿಲ್ಲ– ಎಂದು ತಿಳಿಯುವದು ಆಧ್ಯಾತ್ಮಿಕದ ನಾಲ್ಕು ಬಗೆಯ ಅತುಷ್ಟಿ. ಮತಾಂತರದಲ್ಲಿ ಪ್ರಕೃತಿಯ ಪರಿಣಾಮದಲ್ಲಿಯಾಗಲಿ, ಸಂನ್ಯಾಸ, ಕಾಲ, ಅದೃಷ್ಟ– ಇವುಗಳ ಯೋಗ್ಯತೆಯಲ್ಲಾಗಲಿ, ವಿಶ್ವಾಸವಿಲ್ಲದೆ ಇರುವದು ಆಧ್ಯಾತ್ಮಿಕದ ನಾಲ್ಕು ಬಗೆಯ ಅತುಷ್ಟಿ. ವಿಷಯಗಳನ್ನು ಸಂಪಾದಿಸುವದಕ್ಕೆ ಹೋಗುವದು, ಅವುಗಳನ್ನು ಕಾಪಾಡುವದಕ್ಕೆ ಪ್ರಯತ್ನಮಾಡುವದು, ಅವುಗಳು ಎಂದೆಂದಿಗೂ ಇರುವವೆಂದು ನಂಬುವದು, ವಿಷಯಗಳಲ್ಲಿ ಆಸಕ್ತಿಯಿಡುವದು,

ಮತ್ತು ವಿಷಯಗಳ ಭೋಗಕ್ಕೋಸ್ಕರ ಮತ್ತೊಬ್ಬರಿಗೆ ಹಿಂಸಾದಿಗಳನ್ನು ಮಾಡುವದು-- ಇವು ಐದೂ ಬಾಹ್ಯದ ಅತುಷ್ಟಿಗಳು. ಅಂತೂ ಒಂಬತ್ತು ಅತುಷ್ಟಿಗಳು.

## ಅಷ್ಟಧಾ ಸಿದ್ಧಿಃ ॥ ೧೬ ॥

## ೧೬. ಸಿದ್ಧಿಯು ಎಂಟು ಬಗೆ

ಇನ್ನು ಎಂಟು ಸಿದ್ಧಿಗಳು ಯಾವವೆಂದರೆ : (೧) ಊಹಿಸುವದರಿಂದಲೇ ಜ್ಞಾನವಾಗುವದು ; (೨) ಒಂದು ಮಾತು ಕಿವಿಗೆ ಬಿದ್ದ ಕೂಡಲೇ ಜ್ಞಾನವಾಗುವದು ; (೩) ಓದಿದರೆ ಜ್ಞಾನವಾಗುವದು ; (೪) ಆಧ್ಯಾತ್ಮಿಕದುಃಖವು ಬಂದು ಅದನ್ನು ಪರಿಹರಿಸುವದಕ್ಕಾಗಿ ವಿಚಾರಮಾಡಿ ಅದರಿಂದ ಜ್ಞಾನವಾಗುವದು ; (೫) ಆಧಿಭೌತಿಕದುಃಖವನ್ನು ಪರಿಹರಿಸಿಕೊಳ್ಳುವದಕ್ಕಾಗಿ ವಿಚಾರಮಾಡುವದರಿಂದ ಆಗುವ ಜ್ಞಾನ ; (೬) ಆಧಿದೈವಿಕದುಃಖವು ಬರಲು ಅದನ್ನು ಪರಿಹರಿಸಿಕೊಳ್ಳುವದಕ್ಕಾಗಿ ವಿಚಾರಮಾಡಲು ಉಂಟಾದ ಜ್ಞಾನ ; (೭) ಸ್ನೇಹಿತರ ಸಂಬಂಧದಿಂದ ಆಗುವ ಜ್ಞಾನ ; (೮) ಗುರುವನ್ನು ಪರಿಚರ್ಯೆ, ದಾನ- ಮುಂತಾದವುಗಳಿಂದ ಪ್ರಸನ್ನಮಾಡಿಕೊಂಡು ಸಂಪಾದಿಸುವ ವಿಜ್ಞಾನ- ಹೀಗೆ ಸಿದ್ಧಿಯು ಎಂಟು ಬಗೆ. ಈ ಪ್ರಕರಣದಲ್ಲಿ ಸಿದ್ಧಿಯೆಂದರೆ ಜ್ಞಾನದ ಉಪಾಯವು ; ಸಮಾಧಿಗೆ ಪೂರ್ವದಲ್ಲಿ ಆಗುವದೆಂದು ಯೋಗಶಾಸ್ತ್ರದಲ್ಲಿ ಹೇಳಿದ ಅಣಿಮಾದಿಸಿದ್ಧಿಯಲ್ಲ.

ಮೇಲೆ ಹೇಳಿದ ಎಂಟು ಸಿದ್ಧಿಗಳಲ್ಲಿ ಮೊದಲಿನ ಮೂರು ಮುಖ್ಯ. ಏಕೆಂದರೆ ಜ್ಞಾನಕ್ಕೆ ತಾನು ತಿಳಿಯುವದು, ಮತ್ತೊಬ್ಬರು ಉಪದೇಶಮಾಡುವದು, ಗ್ರಂಥಾವಲೋಕನ- ಇವೇ ಸಾಕ್ಷಾತ್ತಾದ

ಸಾಧನಗಳು. ಮಿಕ್ಕ ಐದೂ ಪರಂಪರೆಯಿಂದ ಸಾಧನಗಳಾಗಿರುವದರಿಂದ ಅವು ಎರಡನೆಯ ತರಗತಿಯ ಸಿದ್ಧಿಗಳಾಗಿರುವವು.

**ಅಸಿದ್ಧಿ**ಗಳು ಈ ಸಿದ್ಧಿಗಳಿಗೆ ವಿರುದ್ಧವಾಗಿರುವವು. ತನ್ನ ಬುದ್ಧಿಯುನ್ನುಪಯೋಗಿಸದವನಿಗೆ ಜ್ಞಾನವಾಗಲಾರದಷ್ಟೆ? ಆದ್ದರಿಂದ ಬುದ್ಧಿಯನ್ನುಪಯೋಗಿಸದಿರುವದು ಒಂದು ಅಸಿದ್ಧಿಯೆನಿಸುವದು. ಬುದ್ಧಿಯನ್ನುಪಯೋಗಿಸಿದರೂ ಮತ್ತೊಬ್ಬರ ಉಪದೇಶಕ್ಕೆ ಕಿವಿಗೊಡದಿದ್ದರೆ ಕೆಲವು ವೇಳೆ ಜ್ಞಾನವುಂಟಾಗುವದಿಲ್ಲ. ಇದೊಂದು ಅಸಿದ್ಧಿ. ಗ್ರಂಥವನ್ನುಪಯೋಗಿಸಿ ಜ್ಞಾನವನ್ನು ಪಡೆಯದಿರುವದು ಅಥವಾ ತಪ್ಪಾಗಿಯೇ ಗ್ರಹಿಸುವದು ಮೂರನೆಯ ಬಗೆಯ ಅಸಿದ್ಧಿ. ಆಧ್ಯಾತ್ಮಿಕದುಃಖ ಬಂದರೂ ವಿಚಾರಮಾಡದೆ, ಆಧಿಭೌತಿಕದುಃಖ ಬಂದರೂ ವಿಚಾರಕ್ಕೆ ಪ್ರಯತ್ನಮಾಡದೆ, ಆಧಿದೈವಿಕದುಃಖದಲ್ಲಿಯೂ ಜ್ಞಾನಕ್ಕೆಳಸದೆ ಇರುವಾತನಿಗೆ ಮೂರು ವಿಧವಾದ ಸಿದ್ಧಿಯ ದ್ವಾರಗಳೂ ಮುಚ್ಚಿದಂತಾಗುವವು; ಆದ್ದರಿಂದ ಇವು ಮೂರೂ ಅಸಿದ್ಧಿಗಳು. ಸ್ನೇಹಿತರ ಸಂಬಂಧವನ್ನೇ ಮಾಡದವನಿಗೆ ಅಂಥ ಸಹವಾಸದಿಂದ ಆಗುವ ಸಿದ್ಧಿಯು ಇಲ್ಲದಂತಾಗುವದು. ಇದು ಏಳನೆಯ ಅಸಿದ್ಧಿ. ಗುರುವನ್ನು ಸೇವಿಸದೆ ಇರುವಾತನಿಗೆ ಒಂದು ದೊಡ್ಡ ಸಾಧನವೇ ಹೋದಂತಾಗುವದು. ಇದೂ ಒಂದು ಅಸಿದ್ಧಿ. ಹೀಗೆ ಎಂಟು ಅಸಿದ್ಧಿಗಳಿರುವವು. ಅಸಿದ್ಧಿಯೆಂದರೆ ಜ್ಞಾನವುಂಟಾಗದೆ ಇರುವ ಬಗೆಯೆಂದರ್ಥ.

ಈ ರೀತಿಯಲ್ಲಿ ಹನ್ನೊಂದು ಇಂದ್ರಿಯದೋಷಗಳು, ಒಂಬತ್ತು ಅತುಷ್ಟಿಗಳು, ಎಂಟು ಅಸಿದ್ಧಿಗಳು– ಇವೆಲ್ಲಾ ಸೇರಿದರೆ ಹದಿನಾಲ್ಕನೆಯ ಸೂತ್ರದಲ್ಲಿ ಹೇಳಿದ **ಇಪ್ಪತ್ತೆಂಟು ಅಶಕ್ತಿ**ಗಳಾಗುವವು.

# ದಶ ಮೂಲಿಕಾರ್ಥಾಃ ॥ ೧೭

## ೧೭. ಹತ್ತು ಮೂಲಿಕಾರ್ಥಗಳು

ಪ್ರಕೃತಿ, ಪುರುಷ- ಇವುಗಳು ಮೂಲಗಳು. ಇವುಗಳು ಒಂದೊಂದಕ್ಕೆ ಐದೈದರಂತೆ ಒಟ್ಟು ಹತ್ತು ವಿಷಯಗಳನ್ನು ಸಾಂಖ್ಯಾಚಾರ್ಯರು ಹೇಳುತ್ತಾರೆ. ಹೇಗೆಂದರೆ :—

**ಅಸ್ತಿತ್ವಮೇಕತ್ವಮಥಾರ್ಥವತ್ತ್ವಂ**
**ಪರಾರ್ಥಮನ್ಯತ್ವಮಕರ್ತೃತಾ ಚ ।**
**ಯೋಗೋ ವಿಯೋಗೋ ಬಹವಃ ಪುಮಾಂಸಃ**
**ಸ್ಥಿತಿಃ ಶರೀರಸ್ಯ ಚ ಶೇಷವೃತ್ತಿಃ ॥**

(೧) ಪ್ರಕೃತಿಯು ಸತ್ಯವಾಗಿರುವದು. (೨) ಅದು ಒಂದೇ. (೩) ಅದಕ್ಕೆ ಪುರುಷನ ಭೋಗಮೋಕ್ಷಗಳೆಂಬ ಉದ್ದೇಶವುಂಟು. (೪) ಅದು ಮತ್ತೊಬ್ಬ ಪುರುಷನಿಗಾಗಿ ಕೆಲಸಮಾಡುವದು. (೫) ಅದು ಪುರುಷನಿಗಿಂತ ಬೇರೆ. (೬) ಪುರುಷನು ಕರ್ತೃವಲ್ಲ. (೭) ಪ್ರಕೃತಿಯ ಸಂಬಂಧವೂ ಪುರುಷನಿಗುಂಟು. (೮) ಪ್ರಕೃತಿಯಿಂದ ಅಗಲುವಿಕೆಯೂ ಪುರುಷನಿಗುಂಟು. (೯) ಪುರುಷರು ಅನೇಕ. (೧೦) ಪ್ರಕೃತಿಯ ಸಂಬಂಧವು ತಪ್ಪಿದಮೇಲೂ ಕುಂಬಾರನು ತಿರುಗಿಸಿಬಿಟ್ಟ ತಿಗುರಿಯಂತೆ ಶರೀರವು ಪ್ರಾರಬ್ಧಶೇಷದಿಂದ ಕೆಲವು ಕಾಲವಿದ್ದುಕೊಂಡಿರುವದು. ಇವು ಹತ್ತೂ **ಮೂಲಿಕಾರ್ಥಗಳು**- ಎಂದರೆ ಸಾಂಖ್ಯರು ಪ್ರಕೃತಿಪುರುಷರ ವಿಚಾರವಾಗಿ ಹೇಳುವ ಮುಖ್ಯವಿಷಯಗಳು.

ಇದುವರೆಗೆ ಹೇಳಿದ ತುಷ್ಟಿಗಳು ಒಂಬತ್ತು, ಸಿದ್ಧಿಗಳು ಎಂಟು, ಅವಿದ್ಯಾಭೇದಗಳು ಐದು, ಅಶಕ್ತಿಗಳು ಇಪ್ಪತ್ತೆಂಟು ಮತ್ತು ಮೂಲಿಕಾರ್ಥಗಳು ಹತ್ತು- ಈ ಅರುವತ್ತು ಪದಾರ್ಥ

ಗಳಿಗೆ **ಪ್ರತ್ಯಯಸರ್ಗ** ಎಂದರೆ ಬುದ್ಧಿವೃತ್ತಿಯ ಸೃಷ್ಟಿಗಳು ಎಂದು ಹೆಸರು. ಅರುವತ್ತು ಪದಾರ್ಥಗಳನ್ನು ತಿಳಿಸುವದರಿಂದ ಸಾಂಖ್ಯ ಶಾಸ್ತ್ರಕ್ಕೆ **ಷಷ್ಟಿತಂತ್ರ**ವೆಂದೂ ಹೆಸರಾಗಿರುವದಾಗಿ ಕೆಲವರು ವ್ಯಾಖ್ಯಾನಕಾರರು ಅಭಿಪ್ರಾಯಪಡುತ್ತಾರೆ.

## ಅನುಗ್ರಹಸರ್ಗಃ ॥ ೧೮ ॥

### ೧೮. ಅನುಗ್ರಹಸರ್ಗವು

ಮೇಲೆ ಹೇಳಿದ ಅರುವತ್ತು ಬಗೆಯ ಸೃಷ್ಟಿಯೂ [illegible] ತ್ಮಿಕವು ಎಂದರೆ ಒಳಗಿನ ಸೃಷ್ಟಿಯು. ಶರೀರಕ್ಕೆ ಒಳಗಿರುವದಕ್ಕೆ ಆಧ್ಯಾತ್ಮಿಕವೆಂಬ ಸಂಜ್ಞೆಯೆಂದು ಹಿಂದೆಯೇ ಎಂಟನೆಯ ಸೂತ್ರದ ವಿವರಣೆಯಲ್ಲಿ ತಿಳಿಸಿದೆಯಷ್ಟೆ? ಪ್ರತ್ಯಯಸರ್ಗವೆಲ್ಲ ಬುದ್ಧಿವೃ[illegible] ಗೆ ಸಂಬಂಧಪಟ್ಟದ್ದಾದ್ದರಿಂದ ಆಧ್ಯಾತ್ಮಿಕಸರ್ಗವೆನಿಸುವದು. [illegible] ಐದು ಭೂತಗಳಿಂದಾಗಿರುವದು. ಈ ಭೂತಗಳ ಸೃಷ್ಟಿಯು ಐದು ತನ್ಮಾತ್ರೆಗಳಿಂದಾಗಿರುವದು. ಐದು ತನ್ಮಾತ್ರೆಗಳನ್ನು ಹಿಂದೆ ವಿವರಿಸಿದೆ. ಇವುಗಳನ್ನು ಇಟ್ಟುಕೊಂಡು (ಅನುಗೃಹ್ಯ) ಎಂದರೆ ಇವುಗಳನ್ನೇ ಉಪಾದಾನವಾಗಿಟ್ಟುಕೊಂಡ ತರುವಾಯ ಭೂತಸರ್ಗವು ಆಗಿರುವದರಿಂದ ಮಹಾಭೂತಗಳ ಸೃಷ್ಟಿಗೆ ಕಾರಣವಾದ ತನ್ಮಾತ್ರೆಗಳ ಸೃಷ್ಟಿಯನ್ನು **ಅನುಗ್ರಹಸರ್ಗ**ವೆನ್ನುತ್ತಾರೆ.

## ಚತುರ್ದಶವಿಧೋ ಭೂತಸರ್ಗಃ ॥ ೧೯ ॥

### ೧೯. ಹದಿನಾಲ್ಕು ವಿಧವಾದ ಭೂತಸರ್ಗವು

ತನ್ಮಾತ್ರೆಗಳಿಂದ ಮಹಾಭೂತಗಳು ಉಂಟಾಗುವವಷ್ಟೆ? ಮಹಾಭೂತಗಳಿಂದ ನಾನಾವಿಧವಾದ ಭೂತಗಳು ಎಂದರೆ

ಪ್ರಾಣಿಗಳು ಉಂಟಾಗುತ್ತವೆ. ಇದರಲ್ಲಿ ದೈವಸೃಷ್ಟಿ ತಿರ್ಯಕ್ಪ್ರಾಣಿಗಳ ಸೃಷ್ಟಿ, ಮಾನುಷಸೃಷ್ಟಿ- ಎಂದು ಮೂರು ಬಗೆಯುಂಟು. **ದೈವಸೃಷ್ಟಿಯಲ್ಲಿ** ಬ್ರಾಹ್ಮ, ಪ್ರಾಜಾಪತ್ಯ, ಸೌಮ್ಯ, ಐಂದ್ರ, ಗಾಂಧರ್ವ, ಯಕ್ಷ, ರಾಕ್ಷಸ, ಪೈಶಾಚ- ಎಂದು ಎಂಟು ವಿಧಗಳಿವೆ. **ತಿರ್ಯಕ್ಪ್ರಾಣಿಗಳ ಸೃಷ್ಟಿಯಲ್ಲಿಯೂ** ಪಶುಗಳು, ಪಕ್ಷಿಗಳು, ಮೃಗಗಳು, ಸರೀಸೃಪ, ಸ್ಥಾವರ- ಎಂದು ಐದು ವಿಧಗಳಿವೆ. ಈ ಹದಿಮೂರಕ್ಕೆ ಮಾನುಷಸೃಷ್ಟಿಯನ್ನು ಸೇರಿಸಿದರೆ ಹದಿನಾಲ್ಕಾಗುತ್ತದೆಯಷ್ಟೆ? ಇದೇ **ಭೂತಸರ್ಗವು.**

**ಅಂತೂ ಪ್ರಕೃತಿಯಿಂದುಂಟಾಗುವ ಸೃಷ್ಟಿಯಲ್ಲಿ ಪ್ರತ್ಯಯಸರ್ಗ, ಅನುಗ್ರಹಸರ್ಗ, ಭೂತಸರ್ಗ- ಎಂದು ಮೂರು ಬಗೆಯಾಯಿತು.**

## ತ್ರಿವಿಧೋ ಬನ್ಧಃ ॥ ೨೦ ॥

## ೨೦. ಮೂರು ಬಗೆಯ ಬಂಧವು

ಪ್ರಕೃತಿಯು ನಾನಾವಿಧವಾದ ಸೃಷ್ಟಿಯನ್ನು ಏಕೆ ಮಾಡುವದು? -ಎಂದರೆ ಪುರುಷನ ಭೋಗಮೋಕ್ಷಕ್ಕಾಗಿ. ಪ್ರಧಾನಕ್ಕೆ ಪುರುಷನು ಏನೂ ಉಪಕಾರಮಾಡುವದಿಲ್ಲವಾದರೂ, ಪ್ರಧಾನಕ್ಕೆ ಸ್ವತಃ ಆಗಬೇಕಾದದ್ದು ಏನೂ ಇಲ್ಲದಿದ್ದರೂ, ತನ್ನ ಕೆಲಸವನ್ನು ಬಿಟ್ಟು ಗೆಳೆಯನ ಕೆಲಸವನ್ನು ಮಾಡಿಕೊಡುವ ಮಿತ್ರನಂತೆ ಈ ಪ್ರಧಾನವು ಪುರುಷನಿಗೆ ಶಬ್ದ, ಸ್ಪರ್ಶ- ಮುಂತಾದ ವಿಷಯಗಳನ್ನು ಅನುಭವಿಸುವದೆಂಬ ಭೋಗವನ್ನು ಮೊದಲು ಮಾಡಿಕೊಡುವದು. ಇದು ಭೋಗವು. ಆಮೇಲೆ ಗುಣ, ಪುರುಷ-

ಇವುಗಳಿಗಿರುವ ವೈಲಕ್ಷಣ್ಯದ ಅರಿವನ್ನು ಮಾಡಿಕೊಡುವದು, ಇದು ಮೋಕ್ಷವು. ಈ ರೀತಿಯಲ್ಲಿ ಭೋಗಮೋಕ್ಷಗಳನ್ನು ಮಾಡುವದೇ ಪ್ರಧಾನದ ಉದ್ದೇಶವೆಂದು ಸಾಂಖ್ಯಾಚಾರ್ಯರು ಹೇಳುತ್ತಾರೆ.

ಈ ಭೋಗಮೋಕ್ಷಗಳನ್ನು ವಿವರಿಸುವದಕ್ಕೆ ಈಗ ಎರಡು ಸೂತ್ರಗಳನ್ನು ಬರೆದಿರುತ್ತಾರೆ. ಈ ಮೊದಲನೆಯ ಸೂತ್ರದಲ್ಲಿ ಭೋಗದಲ್ಲಿ ತೋರುವ ಮೂರು ವಿಧವಾದ ಬಂಧಗಳನ್ನು ಹೇಳಿದಾರೆ. ಎಂಟು ವಿಧವಾದ ಪ್ರಕೃತಿಯೇ ಹೆಚ್ಚಿನದು, ಇದಕ್ಕೆ ಮಿಗಿಲಾದುದಿಲ್ಲ- ಎಂಬ ಅಭಿಮಾನವೇ **ಪ್ರಾಕೃತಬಂಧವು**. ಸಂನ್ಯಾಸವನ್ನು ತೆಗೆದುಕೊಂಡರೂ ಇಂದ್ರಿಯಪರವಶನಾಗಿರುವದು **ವೈಕಾರಿಕಬಂಧವು**. ವಿಷಯಗಳನ್ನು ಸಾಕ್ಷಾತ್ತಾಗಿ ಅನುಭವಿಸುತ್ತಾ ಅವುಗಳಲ್ಲಿಟ್ಟುಕೊಂಡಿರುವ ಹೆಚ್ಚಿನ ಅಭಿಮಾನವೇ ಪ್ರಾಕೃತಬಂಧವಾಗುವದು ; ಆದರೆ ವಿಷಯಗಳನ್ನು ಹೊರಗೆ ಬಿಟ್ಟರೂ ಮನದಲ್ಲಿ ಬಿಡದೆ ತೊಳಲುವದೇ ವೈಕಾರಿಕಬಂಧವು. ಇವೆರಡು ಬಂಧಗಳಲ್ಲಿಯೂ ಪ್ರಕೃತಿಯಲ್ಲಿರುವ ಆಸಕ್ತಿಯು ಸಮವಾಗಿಯೇ ಇರುವದು. ಬೇಕಾದ ದಕ್ಷಿಣೆಯನ್ನು ಕೊಟ್ಟರೆ ಇಂಥಿಂಥ ಕಾಮವು ಪೂರ್ತಿಯಾಗುವದೆಂದಾಗಲಿ, ತಾನು ದಾತೃವೆಂದು ಹೊಗಳಿಸಿಕೊಂಡು ಸುಖಪಡಬಹುದೆಂದಾಗಲಿ, ಲೋಕಾಂತರದಲ್ಲಿ ಸುಖವು ದೊರೆಯಬಹುದೆಂದಾಗಲಿ- ಇಟ್ಟುಕೊಂಡು ಮಾಡುವ ದಾನದಿಂದಾಗಿರುವ ಬಂಧಕ್ಕೆ **ದಕ್ಷಿಣಾಬಂಧ**ವೆಂದು ಹೆಸರು. ಸಕಲಕಾಮ್ಯಕರ್ಮಗಳೂ ದಕ್ಷಿಣಾಬಂಧವೇ ಆಗಿರುವವು. ಅಜ್ಞಾನದಿಂದ ಪ್ರಾಕೃತಬಂಧವಾಗಿರುವದು. ಕಾಮದಿಂದ ದಕ್ಷಿಣಾಬಂಧವಾಗಿರುವದು. ವಿಷಯವಾಸನೆಯಿಂದ ವೈಕಾರಿಕಬಂಧವಾಗಿರುವದು.

# ತ್ರಿವಿಧೋ ಮೋಕ್ಷಃ ॥ ೨೧ ॥

## ೨೧. ಮೂರು ಬಗೆಯ ಮೋಕ್ಷವು

ಬಂಧಕ್ಕೆ ಕಾರಣವು ಯಾವದೋ ಅದನ್ನು ಹೋಗಲಾಡಿಸಿದರೆ ಮೋಕ್ಷವಾಗುವದು ಸ್ವಾಭಾವಿಕ. ಆದ್ದರಿಂದ ಪ್ರಕೃತಿಯೇ ಹೆಚ್ಚಿನದೆಂಬ ಅಜ್ಞಾನದಿಂದಾಗಿರುವ ಪ್ರಾಕೃತಬಂಧವು ಪ್ರಕೃತಿಪುರುಷರನ್ನು ಬಿಡಿಸಿ ತಿಳಿಯುವದರಿಂದ ಹೋಗುತ್ತದೆ. ಮನಸ್ಸಿನಲ್ಲಿರುವ ಅತ್ಯುತ್ಕಟವಾದ ವಿಷಯರಾಗವು ಕಡಿಮೆಯಾದರೆ ವೈಕಾರಿಕರಾಗವು ಹೋಗುತ್ತದೆ. ತನ್ನಲ್ಲಿರುವ ದಕ್ಷಿಣೆ ಮುಂತಾದವು ತೀರಿಹೋಗಿ ಮುಂದೆ ಆ ಬಗೆಯ ಆಶೆಯುಂಟಾಗದಿದ್ದರೆ ದಕ್ಷಿಣಾಬಂಧವು ಹೋಗುತ್ತದೆ.

ಮೊದಮೊದಲು ಸಾಹಂಕಾರವಾಗಿಯೂ ಆಶೆಯಿಂದಲೂ ಕರ್ಮವನ್ನು ಮಾಡುತ್ತಾ ಇದ್ದವನು ಪುಣ್ಯವಶದಿಂದ ಬುದ್ಧಿಶುದ್ಧಿಯಾಗಲು ನಿಷ್ಕಾಮಕರ್ಮಕ್ಕೆ ಮೊದಲುಮಾಡುವನು; ಆಗ ದಕ್ಷಿಣಾಬಂಧದಿಂದ ಬಿಡುಗಡೆಯಾಯಿತು. ವಿಷಯದೋಷಗಳನ್ನು ತಿಳಿದಹಾಗೆಲ್ಲಾ ರಾಗವು ಕಡಿಮೆಯಾಗುವದು; ಆಗ ವೈಕಾರಿಕಬಂಧವು ಬಿಡುಗಡೆಯಾಯಿತು. ಈ ಎರಡು ಬಂಧಗಳೂ ಇಲ್ಲದವನಿಗೆ ಪುಣ್ಯಾಪುಣ್ಯಗಳು ಇಲ್ಲವಾಗಿ ಪ್ರಕೃತಿಪುರುಷರನ್ನು ವಿಂಗಡಿಸಿ ತಿಳಿಯುವ ತತ್ತ್ವಜ್ಞಾನವುಂಟಾಗುತ್ತದೆ; ಆಗ ಪ್ರಾಕೃತಬಂಧದಿಂದಲೂ ಬಿಡುಗಡೆಯಾಗುವದು. ಹೀಗೆ ಪುರುಷನಿಗೆ ಮೂರು ಮೆಟ್ಟಲಿನಲ್ಲಿ ಮೋಕ್ಷವಾಗುತ್ತದೆ.

# ತ್ರಿವಿಧಂ ಪ್ರಮಾಣಮ್ ॥ ೨೨ ॥

## ೨೨. ಮೂರು ವಿಧವಾದ ಪ್ರಮಾಣವು

ಪ್ರತ್ಯಕ್ಷ, ಅನುಮಾನ, ಶಬ್ದ- ಇವು ಮೂರೂ ಪ್ರಮಾಣಗಳು. ಪ್ರಮಾಣ ಎಂಬ ಮಾತಿಗೆ ವ್ಯುತ್ಪತ್ತಿಯನ್ನು ಹೇಳುವಾಗ

ಪ್ರಮೆಗೆ ಕರಣವಾದದ್ದೇ ಪ್ರಮಾಣವು ಎನ್ನುತ್ತಾರೆ. ಪ್ರಮೆ ಎಂದರೆ ಸರಿಯಾದ ತಿಳಿವಳಿಕೆ; ಕರಣವೆಂದರೆ ಅವಶ್ಯವಾಗಿ ಬೇಕಾಗುವ ಸಾಧನ. ನಮಗೆ ಸರಿಯಾದ ತಿಳಿವಳಿಕೆಯು ಮೂರು ಬಗೆಯ ಪ್ರಮಾಣಗಳಿಂದ ಹುಟ್ಟುವದೆಂದು ಸಾಂಖ್ಯರು ಹೇಳುತ್ತಾರೆ. ಇಂದ್ರಿಯಗಳಿಂದ ನೋಡಿ ತಿಳಿಯುವದಕ್ಕೆ **ಪ್ರತ್ಯಕ್ಷ** ಜ್ಞಾನವೆಂದು ಹೆಸರು. ಇದಕ್ಕೆ ಸಾಧನವಾಗಿರುವ ಇಂದ್ರಿಯಗಳೇ **ಪ್ರತ್ಯಕ್ಷಪ್ರಮಾಣ**ಗಳು. ಉದಾಹರಣೆಗೆ ಕಣ್ಣಿನಲ್ಲಿರುವ ಇಂದ್ರಿಯವು ರೂಪವನ್ನು ತಿಳಿಯುವದಕ್ಕೆ ಸಾಧನವಾಗಿದೆ. ಆದ್ದರಿಂದ ರೂಪಜ್ಞಾನವು ಪ್ರತ್ಯಕ್ಷವು; ಕಣ್ಣಿನ ಇಂದ್ರಿಯವು ಪ್ರತ್ಯಕ್ಷಪ್ರಮಾಣವು. ಒಂದು ಗುರುತಿನಿಂದ ಊಹಿಸಿ ತಿಳಿಯುವ ಸರಿಯಾದ ಜ್ಞಾನವು ಅನುಮಿತಿಯೆನಿಸುವದು. ಇದಕ್ಕೆ ಸಾಧನವಾಗಿರುವ ಗುರುತಿಗೆ **ಲಿಂಗ**ವೆಂದು ಹೆಸರು. ಲಿಂಗಜ್ಞಾನದಿಂದ ಲಿಂಗಿಯನ್ನು (ಎಂದರೆ ಗುರುತುಳ್ಳದ್ದನ್ನು) ಅರಿಯುವದೇ **ಅನುಮಿತಿಯು.** ಉದಾಹರಣೆಗೆ ಆಕಾಶದಲ್ಲಿ ಮೋಡವು ಒಲವಾಗಿರುವಾಗ ಮಳೆ ಬರುವದೆಂಬ ಊಹೆಯಾಗುತ್ತದೆ. ಇಲ್ಲಿ **ಮೋಡವೇ** ಲಿಂಗವು. ಆದ್ದರಿಂದ ಅದೇ **ಅನುಮಾನಪ್ರಮಾಣವು.** ಹೀಗೆ ಇಂದ್ರಿಯಗಳಿಂದ ಅನುಭವಿಸುವದಕ್ಕಾಗಲಿ, ಗುರುತಿನಿಂದ ಊಹಿಸುವದಕ್ಕಾಗಲಿ ಆಗದೆ ಇರುವ ತಿಳಿವಳಿಕೆಯು **ಶಬ್ದಪ್ರಮಾಣ**ದಿಂದ ಎಂದರೆ ಶಾಸ್ತ್ರದಿಂದ ಅಥವಾ ಬಲ್ಲವರ ನುಡಿಯಿಂದ- ಆಗುವದು. ಉದಾಹರಣೆಗೆ ಇಂದ್ರನು ದೇವತೆಗಳ ರಾಜನು, ಸ್ವರ್ಗದಲ್ಲಿ ಅಪ್ಸರಸ್ತ್ರೀಯರಿದ್ದಾರೆ- ಮುಂತಾದ ಜ್ಞಾನವು ಶ್ರುತಿಯಿಂದಾಗುವದು. ಹೀಗೆಯೇ ಆಪ್ತರು ಹೇಳುವ ಮಾತಿನಿಂದ ಭೂಗೋಳದ ಕೇಂದ್ರದಲ್ಲಿ ಉಷ್ಣವು ಹೆಚ್ಚಾಗಿರುವದು, ಗೌರೀಶಂಕರಶಿಖರದ ಮೇಲುಭಾಗದಲ್ಲಿ ವಾನರಜಾತಿಯ ಜನರಿರುವರು- ಎಂಬಿವೇ ಮುಂತಾದ ಜ್ಞಾನಗಳು ಆಗುವವು. ಇಂಥ ಜ್ಞಾನಗಳಿಗೆಲ್ಲ ಶಬ್ದವೇ ಪ್ರಮಾಣವು.

ಬೇರೆಯ ಶಾಸ್ತ್ರಗಳಲ್ಲಿ ಪ್ರಮಾಣಗಳು ನಾಲ್ಕು, ಆರು- ಎಂದು ಮುಂತಾಗಿ ಹೇಳುವದುಂಟು. ಅವುಗಳೆಲ್ಲ ಈ ಮೂರ ರಲ್ಲಿಯೇ ಅಡಗಿವೆಯೆಂಬುದು ಸಾಂಖ್ಯರ ಮತ.

ಸಾಂಖ್ಯರು ಹೇಳುವ ತತ್ತ್ವಗಳಲ್ಲಿ ಕೆಲಕೆಲವನ್ನು ಈ ಪ್ರಮಾಣಗಳಲ್ಲಿ ಒಂದೊಂದರಿಂದ ಅರಿತುಕೊಳ್ಳಬೇಕಾಗಿರುವದು. ಹೇಗೆಂದರೆ **ಪ್ರಧಾನ, ಪುರುಷ- ಈ ತತ್ತ್ವಗಳನ್ನು ಅನುಮಾನ ದಿಂದ** ಅರಿಯಬೇಕಾಗುವದು. ಜಗತ್ತೆಲ್ಲ ತ್ರಿಗುಣರೂಪವಾಗಿರು ತ್ತದೆಯಷ್ಟೆ? ತ್ರಿಗುಣಾತ್ಮಕವಾದ ಕಾರ್ಯಕ್ಕೆ ತ್ರಿಗುಣಾತ್ಮಕವಾದ ಕಾರಣವೇ ಇರಬೇಕು. ಆದ್ದರಿಂದ ಜಗತ್ತಿಗೆ ತ್ರಿಗುಣಾತ್ಮಕವಾದ ಒಂದು ಕಾರಣವಿರಬೇಕು. ಇದೇ ಪ್ರಧಾನವು. ಹೀಗೆ ಊಹಿಸಿ ತಿಳಿಯಬೇಕಾಗಿರುವದರಿಂದ ಪ್ರಧಾನವು ಅನುಮಾನಗಮ್ಯವಾ ಯಿತು. ಜಗತ್ತಿನಲ್ಲಿರುವ ಬುದ್ಧಿಯೇ ಮುಂತಾದ ತತ್ತ್ವಗಳು ನಿಜವಾಗಿ ಚೇತನವಲ್ಲ. ಆದರೂ ಚೇತನವಾಗಿ ತೋರುತ್ತಿವೆ. ಆದ್ದರಿಂದ ಇವಕ್ಕೆ ಕಾರಣವಾಗಿ ಚೇತನವೊಂದು ಇರಬೇಕು. ಇದೇ ಪುರುಷನು. ಹೀಗೆ ಪುರುಷನನ್ನೂ ಅನುಮಾನಪ್ರಮಾಣ ದಿಂದ ಊಹಿಸಿ ತಿಳಿಯಬೇಕು. **ವ್ಯಕ್ತವಾಗಿರುವ ತತ್ತ್ವಗಳೆಲ್ಲ ಪ್ರತ್ಯಕ್ಷದಿಂದಲೇ** ತಿಳಿಯಬರುವವು, ಎಂದರೆ ಅಂತಃಕರಣದಿಂದ ಲೋ ಬಹಿಃಕರಣದಿಂದಲೋ ನೇರಾಗಿ ಅನುಭವಿಸಿ ತಿಳಿಯು ವದಕ್ಕೆ ಸಾಧ್ಯವಾಗಿರುತ್ತವೆ. ದೈವ ಸೃಷ್ಟಿ ಮುಂತಾದವನ್ನು ಸಾಂಖ್ಯರು ಹೇಳುತ್ತಾರಷ್ಟೆ? ಅವನ್ನು ಆಪ್ತವಚನದಿಂದ ಅರಿಯ ಬೇಕು. ಈ ವಿಷಯಕ್ಕೆ ಕಪಿಲರು ಮುಂತಾದವರೇ **ಆಪ್ತರು,** ಎಂದರೆ ಇವುಗಳನ್ನು ಕಾಣುವ ಶಕ್ತಿಯುಳ್ಳ ಮತ್ತು ತಾವು ಕಂಡ ಷ್ಟನ್ನು ಕಂಡಂತೆ ನಿರ್ವಂಚನೆಯಿಂದ ತಿಳಿಸಬಲ್ಲ ಮಹನೀಯರು.

ಏತತ್ಪರಂ ಯಾಥಾರ್ಥ್ಯಮ್ ॥ ೨೩ ॥

ಏತತ್ಸಮ್ಯಗ್ಜ್ಞಾತ್ವಾ ಕೃತಕೃತ್ಯಃ ಸ್ಯಾತ್ ॥ ೨೪ ॥

ನ ಪುನಸ್ತ್ರಿವಿಧೇನ ದುಃಖೇನಾಭಿಭೂಯತೇ ॥ ೨೫ ॥

೨೩. ಇದೇ ಹೆಚ್ಚಿನ ಪರಮಾರ್ಥವು.

೨೪. ಇದನ್ನು ಚೆನ್ನಾಗಿ ಅರಿತರೆ ಕೃತಕೃತ್ಯನಾಗುವನು.

೨೫. ಮತ್ತೆ ಮೂರು ಬಗೆಯಾದ ದುಃಖಕ್ಕೆ ಸಿಕ್ಕಿ ನರಳುವದಿಲ್ಲ.

ಈ ಮೂರೂ ಉಪಸಂಹಾರಸೂತ್ರಗಳು. ಮನುಷ್ಯನು ಹುಟ್ಟಿದ್ದಕ್ಕೆ ಏನು ಮಾಡಬೇಕು? ಮನುಷ್ಯನು ಕೇವಲ ಇಂದ್ರಿಯ ಭೋಗಕ್ಕಾಗಿ ಹುಟ್ಟಿರುವದಿಲ್ಲ. ಸಾಮಾನ್ಯಜನರು ಹಾಗೆ ತಿಳಿದು ಕೊಂಡಿದ್ದರೂ ಸ್ವಲ್ಪಕಾಲವಾದಮೇಲೆ ತಮ್ಮ ಮಕ್ಕಳಾಟವನ್ನು ಬಿಟ್ಟು ಹಿರಿಯರ ತಿಳಿವಳಿಕೆಯನ್ನೇ ಅವರೂ ಅನುಸರಿಸುವರು. ಏಕೆಂದರೆ ಇಂದ್ರಿಯಭೋಗವೇ ಪುರುಷಾರ್ಥವೆನ್ನುವ ಜನರಿಗೆ ಮೂರು ವಿಧವಾದ ದುಃಖವು ತಪ್ಪಿದ್ದಲ್ಲ. ಹೊರಗೆ ಶೀತವಾತಾದಿ ಗಳಿಂದ ಇವರಿಗೆ ದುಃಖವಾಗುತ್ತಲೇ ಇರುವದು. ಇದಕ್ಕೆ **ಆಧಿದೈವಿಕದುಃಖ**ವೆಂದು ಹೆಸರು. ಇದಲ್ಲದೆ ಮನುಷ್ಯರು, ಮೃಗ ಗಳು- ಮುಂತಾಗಿ ನಾನಾಪ್ರಾಣಿಗಳು ಜಗತ್ತಿನಲ್ಲಿರುವವಷ್ಟೆ ; ಅವುಗಳಿಂದಲೂ ಜೀವರಿಗೆ ದುಃಖವಾಗುತ್ತಲೇ ಇರುವದು. ಈ ದುಃಖಕ್ಕೆ **ಆಧಿಭೌತಿಕದುಃಖ**ವೆಂದು ಹೆಸರು. ಹೊರಗೆ ಮತ್ತೊಬ್ಬ ರಿಂದ ಆಗುವ ದುಃಖವೇ ಅಲ್ಲದೆ ತಮ್ಮತಮ್ಮ ಶರೀರಮನಸ್ಸು

ಗಳಲ್ಲಿಯೂ ಜ್ವರ, ವ್ಯಸನ- ಮುಂತಾಗಿ ದುಃಖಗಳುಂಟಾಗುತ್ತಿರುವವು ; ಇವಕ್ಕೆ **ಆಧ್ಯಾತ್ಮಿಕದುಃಖವೆಂದು** ಹೆಸರು.[1]

ಈ ಮೂರು ಬಗೆಯ ದುಃಖಗಳಿಗೆ ತಾವು ಕಂಡುಕೇಳಿದ ಪರಿಹಾರೋಪಾಯಗಳನ್ನು ಅನುಸರಿಸಿ ಅನುಸರಿಸಿ ಬೇಸತ್ತಮೇಲೆ ದುಃಖವು ಮತ್ತೆ ಎಂದಿಗೂ ಬರದಂತೆ ಅತ್ಯಂತವಾಗಿ ನಿವೃತ್ತಿಯಾಗುವದಕ್ಕೆ ಉಪಾಯವೇ ಇಲ್ಲವೆ ?- ಎಂದು ಅವಶ್ಯವಾಗಿ ಜನರು ವಿಚಾರಿಸುವರು. ಅಂಥ ಜಿಜ್ಞಾಸುಗಳಿಗೆ ಸಾಂಖ್ಯರು ಹೇಳುವದೇನೆಂದರೆ- ನಿಜವಾದ ತತ್ತ್ವಗಳನ್ನು ಅರಿತುಕೊಂಡರೆ ಈ ದುಃಖಗಳು ಆಗುವದಿಲ್ಲ. ಶರೀರಾದಿಗಳೇ ನಾವೆಂಬ ಜ್ಞಾನವು ಜನರಿಗಿರುತ್ತದೆ ; ಆದರೆ ಅದು ಸರಿಯಾದ ತಿಳಿವಳಿಕೆಯಲ್ಲ. ಶರೀರಾದಿಗಳು ಪ್ರಕೃತಿಯ ಅಥವಾ ಪ್ರಧಾನದ ಕಾರ್ಯಗಳು, ಪ್ರಧಾನವು ಅಚೇತನವು. ಅಚೇತನವಾದ ಪ್ರಧಾನದ ಕಾರ್ಯಗಳಾದ ಶರೀರಾದಿಗಳಲ್ಲಿ ತೋರುವ ದುಃಖವನ್ನೇ ತಮ್ಮದೆಂದು ಜನರು ತಿಳಿದುಕೊಂಡು ಸಂಕಟಕ್ಕೊಳಗಾಗಿರುವರು. ತಾವು ನಿತ್ಯಶುದ್ಧರಾಗಿರುವ ಪುರುಷರೆಂದೂ ಚೇತನರಾದ ತಮಗೂ ಅಚೇತನವಾದ ಪ್ರಕೃತಿಗೂ ನಿಜವಾಗಿ ಯಾವ ಸಂಬಂಧವೂ ಇಲ್ಲವೆಂದೂ ವಿಂಗಡಿಸಿ ತಿಳಿದುಕೊಂಡುಬಿಟ್ಟರೆ ಅವಿವೇಕದಿಂದ ಆಗಿರುವ ಈ ದುಃಖವು ಆತ್ಯಂತಿಕವಾಗಿ ಹೋಗಿಬಿಡುವದು. ಇದಕ್ಕೊಂದು ದೃಷ್ಟಾಂತವನ್ನು ಕೊಡಬಹುದು. ಒಂದು ಶುದ್ಧವಾದ ಸ್ಫಟಿಕದ ಹತ್ತಿರ ಒಂದು ದಾಸಿವಾಳದ ಹೂವನ್ನು ಇಟ್ಟ

1. ೨೩ನೆಯ ಸೂತ್ರದ ಹಿಂದೆ 'ತ್ರಿವಿಧಂ ದುಃಖಮ್' ಎಂಬುದೊಂದು ಸೂತ್ರವು ಕೆಲವು ಪಾಠಗಳಲ್ಲಿರುತ್ತದೆ. ಅದರ ವಿವರವನ್ನು ಈವರೆಗೆ ಹೇಳಿದ್ದಾಗಿದೆ. ೨೫ನೆಯ ಸೂತ್ರದಲ್ಲಿರುವ 'ತ್ರಿವಿಧೇನ ದುಃಖೇನ' ಎಂಬ ಮಾತಿನಲ್ಲಿ ಇವುಗಳು ಸೂಚಿತವಾಗಿವೆ ಎಂಬ ಭಾವನೆಯಿಂದ ಆ ಸೂತ್ರವನ್ನು ಕೆಲವರು ಬಿಟ್ಟಿದಾರೆ.

ದ್ದರೆ ದಾಸಿವಾಳದ ಕೆಂಪು ಸ್ಫಟಿಕದಲ್ಲಿಯೂ ಪ್ರತಿಫಲಿಸಿ ತೋರುತ್ತದೆ. ಸ್ಫಟಿಕವು ಸ್ವಚ್ಛವಾಗಿಯೇ ಇದ್ದರೂ ತಿಳಿಯದವರಿಗೆ ಅದು ಕೆಂಪುಬಣ್ಣವಾಗಿರುವದೆಂದು ಭ್ರಾಂತಿಯಾಗಿರುತ್ತದೆ. ಆದರೆ ಆ ಕೆಂಪು ದಾಸಿವಾಳಕ್ಕೆ ಸೇರಿದ್ದೆಂದೂ ಸ್ಫಟಿಕಕ್ಕೇನೂ ಅದರ ಸಂಬಂಧವಿಲ್ಲವೆಂದೂ ತಿಳಿದುಕೊಂಡುಬಿಟ್ಟರೆ ಈ ಭ್ರಾಂತಿಯು ಹೋಗಿಬಿಡುತ್ತದೆ. ಹೀಗೆಯೇ ಪ್ರಕೃತಿಪುರುಷರ ವಿವೇಕದಿಂದ ನಮ್ಮ ದುಃಖವನ್ನು ಸಂಪೂರ್ಣವಾಗಿ ಹೋಗಲಾಡಿಸಿಕೊಳ್ಳಬಹುದು.

ಆದ್ದರಿಂದ ದುಃಖಪರಿಹಾರಕ್ಕಾಗಿ ನಾವು ಮತ್ತೇನೂ ಮಾಡಬೇಕಾದದ್ದಿಲ್ಲ. ಈ ತತ್ತ್ವಸಮಾಸದಲ್ಲಿ ಹೇಳಿರುವ ಪರಮಾರ್ಥವನ್ನು ಚೆನ್ನಾಗಿ ಮನನಮಾಡಿ ಮನದಟ್ಟುಮಾಡಿಕೊಳ್ಳಬೇಕು. ಆಗ ನಾವು ಕೃತಕೃತ್ಯರು, ಮಾಡಬೇಕಾದದ್ದೇನೂ ನಮಗಿರುವದಿಲ್ಲ, ನಿತ್ಯಶುದ್ಧರೂ ಅಸಂಗರೂ ಆದ ಪುರುಷರೇ ನಾವು- ಎಂಬ ಜ್ಞಾನವು ಉದಯಿಸುವದು. ಈ ಜ್ಞಾನವನ್ನು ಪಡೆಯುವದೇ **ಪರಮಪುರುಷಾರ್ಥವು.**

# ಸಾಂಖ್ಯವೇದಾಂತಗಳ ತಾರತಮ್ಯ

[ಈ ಪರಿಶಿಷ್ಟದಲ್ಲಿ ವೇದಾಂತವೆಂದರೆ ಶ್ರೀ ಶಂಕರಾಚಾರ್ಯರಿಗೆ ಸಮ್ಮತವಾದ ಅದ್ವೈತವೆಂಬ ಅರ್ಥವನ್ನು ಇಟ್ಟುಕೊಳ್ಳಬೇಕು. ಶಾಂಕರವೇದಾಂತಿಗಳಂತೆಯೇ ಮಾಧ್ವರಾಮಾನುಜವಲ್ಲಭದ್ವೈತನ್ಯಾದಿಮತಗಳನ್ನನುಸರಿಸುವ ವೇದಾಂತಿಗಳೂ ಸಾಂಖ್ಯ ದರ್ಶನದ ಬೆಂಬಲವನ್ನು ಕೆಲಕೆಲವು ಅಂಶಗಳಲ್ಲಿ ಪಡೆದಿರುತ್ತಾರೆ; ಸಾಂಖ್ಯರಂತೆಯೇ ಪುರುಷರು ಅನೇಕರೆಂಬುದನ್ನೂ ಮೂಲಪ್ರಕೃತಿಯು ಸತ್ಯವಾಗಿರುವದೆಂಬುದನ್ನೂ ಒಪ್ಪಿರುತ್ತಾರೆ. ಆದರೆ ಅವರೆಲ್ಲರೂ ಈಶ್ವರವಾದಿಗಳಾದ್ದರಿಂದ ತಮ್ಮತಮ್ಮ ಸಿದ್ಧಾಂತಕ್ಕೆ ಒಗ್ಗದ ಸಾಂಖ್ಯವಾದಗಳನ್ನು ಅವರೂ ಶಂಕರಾಚಾರ್ಯರಂತೆಯೇ ಖಂಡಿಸಿರುತ್ತಾರೆ.]

ಸಾಂಖ್ಯಶಾಸ್ತ್ರವು ವೇದಾಂತದ ಸಿದ್ಧಾಂತಕ್ಕೆ ತೀರ ಹತ್ತಿರವಾಗಿರುವ ತತ್ತ್ವಾರ್ಥವನ್ನೇ ಬೋಧಿಸುವದು. ಭಾರತ, ಮನುಸ್ಮೃತಿ, ವಿಷ್ಣುಪುರಾಣ, ಭಾಗವತ- ಮುಂತಾದ ಗ್ರಂಥಗಳಲ್ಲಿ ಇವರ ಪ್ರಕ್ರಿಯೆಯನ್ನೇ ಅನುಸರಿಸಿ ತತ್ತ್ವಾರ್ಥವನ್ನು ವಿವರಿಸಿರುತ್ತದೆ. ಭಾರತಾಂತರ್ಗತವಾಗಿರುವ ಭಗವದ್ಗೀತೆಯಲ್ಲಿ ಸಾಂಖ್ಯರ ಪ್ರಕೃತಿಯ ವಿಚಾರವು ಮತ್ತೆಮತ್ತೆ ಬಂದಿರುತ್ತದೆ. ಆದ್ದರಿಂದ ಸಾಂಖ್ಯರಿಂದ ವೇದಾಂತಿಗಳು ಗ್ರಹಿಸಿರುವ ವಿಷಯಗಳು ಯಾವುವು, ಸಾಂಖ್ಯರ ಸಿದ್ಧಾಂತದಲ್ಲಿ ವೇ ಂತಿಗಳು ಒಪ್ಪದೆ ಖಂಡಿಸಿರುವ ವಿಷಯಗಳು ಯಾವುವು? -ಎಂಬುವನ್ನು ತಿಳಿಯುವದು ಅವಶ್ಯವಾಗಿರುವದು. ತತ್ತ್ವಸಮಾಸದಲ್ಲಿ ಸಾಂಖ್ಯರ ಮೂಲಿಕಾರ್ಥಗಳು ಹತ್ತೆಂದು ಹೇಳಿರುತ್ತಾರಷ್ಟೆ?[1] ಆ ವಿಷಯದಲ್ಲಿ ವೇದಾಂತಗ್ರಂಥಗಳಲ್ಲಿ ತೋರಿಬರುವ ಭಿನ್ನಾಭಿಪ್ರಾಯಗಳನ್ನು ಇಲ್ಲಿ ಕ್ರಮಕ್ರಮವಾಗಿ ವಿವರಿಸುತ್ತೇವೆ.

ಪ್ರಕೃತಿಯ ವಿಷಯದಲ್ಲಿ ಸಾಂಖ್ಯರು ಐದು ಮೂಲಿಕಾರ್ಥಗಳನ್ನು ಇಟ್ಟುಕೊಂಡಿದ್ದಾರೆ. **ಪ್ರಕೃತಿಯು ಅಥವಾ ಪ್ರಧಾನವು ಸತ್ಯವಾಗಿದೆಯೆಂಬುದು ಮೊದಲನೆಯ ಮೂಲಿಕಾರ್ಥ.** ಈ ಜಗತ್ತಿಗೆ ಒಂದು ಅವ್ಯಕ್ತವಾದ ರೂಪವು ಪ್ರಲಯಕಾಲದಲ್ಲಿರುವದೆಂತಲೂ ವ್ಯಕ್ತಾವ್ಯಕ್ತರೂಪ

1. ತತ್ತ್ವಸಮಾಸದ ಹದಿನೇಳನೆಯ ಸೂತ್ರವನ್ನು ನೋಡಿ.

ಗಳಲ್ಲಿ ಜಗತ್ತು ಅನಾದಿಕಾಲದಿಂದಲೂ ತೋರಿಕೊಳ್ಳುತ್ತಿರುವದೆಂತಲೂ ಸಾಂಖ್ಯರು ವೇದಾಂತಿಗಳು- ಇಬ್ಬರೂ ಹೇಳುತ್ತಾರೆ. ಆದರೆ ಸಾಂಖ್ಯರು ಅವ್ಯಕ್ತವು ಸ್ವತಂತ್ರವಾಗಿಯೇ ಇದ್ದುಕೊಂಡಿರುವದು ಎನ್ನುತ್ತಾರೆ; ವೇದಾಂತಿಗಳು ಮಾತ್ರ ಇದನ್ನೊಪ್ಪುವದಿಲ್ಲ. ಅವರು ಆತ್ಮನಿಗೆ ಅಧೀನವಾಗಿಯೇ ಜಗತ್ತಿನ ಅವ್ಯಕ್ತಸ್ಥಿತಿ ಇರುವದೆನ್ನುತ್ತಾರೆ. ಜಗತ್ತು ವ್ಯಕ್ತವಾಗಿರುವಾಗಲೂ ಎಂದರೆ ಹೊರತೋರಿಕೊಂಡು ಬಿಡಿಬಿಡಿಯಾಗಿ ತೋರುವಾಗಲೂ, ಅವ್ಯಕ್ತವಾಗಿರುವಾಗಲೂ ಎಂದರೆ ಕಾರಣರೂಪದಲ್ಲಿರುವಾಗಲೂ, ತ್ರಿಗುಣಾತ್ಮಕವಾಗಿಯೇ ಇರುವದು. ಮೂರು ಗುಣಗಳೂ ಸಮಪ್ರಮಾಣವಾಗಿರುವಾಗ ಅದೇ ಜಗತ್ತು ಅವ್ಯಕ್ತವಾಗಿದ್ದು ಪ್ರಧಾನವೆನಿಸುವದು; ಗುಣಗಳ ಪ್ರಮಾಣವು ಹೆಚ್ಚುಕಡಿಮೆಯಾಗಿರುವ ಸ್ಥಿತಿಯಲ್ಲಿ ಈ ಪ್ರಧಾನವೇ ವ್ಯಕ್ತವಾಗಿ ಜಗತ್ತೆಂದು ಕರೆಯಿಸಿಕೊಳ್ಳುವದು. ವ್ಯಕ್ತವಾಗಿರಲಿ ಅವ್ಯಕ್ತವಾಗಿರಲಿ, ಪ್ರಧಾನವು ಅಥವಾ ಅದರ ಮಾರ್ಪಾಡಾಗಿರುವ ಜಗತ್ತು ಸ್ವತಂತ್ರವಾಗಿಯೇ ಇರುವದು; ಪ್ರಧಾನಕ್ಕಿಂತ ಬೇರೆಯಾದ ಅದಕ್ಕಿಂತಲೂ ಸೂಕ್ಷ್ಮವಾದ ತತ್ತ್ವವೆಂಬುವೇ ಇಲ್ಲ- ಎಂಬುದು **ಸಾಂಖ್ಯರ ಮತವು.** ಜಗತ್ತು ತ್ರಿಗುಣಾತ್ಮಕವಾಗಿ ತೋರುವದೆಂಬುದು ನಿಜವಾದರೂ ಅದು ಸಾಂಖ್ಯರು ಹೇಳುವಂತೆ ಸ್ವತಂತ್ರವಾಗಿದ್ದುಕೊಂಡಿರುವ ಪ್ರಧಾನದಿಂದ ಬಂದದ್ದಲ್ಲವೆಂದೂ, ಜಗತ್ತಿಗೆ ಆತ್ಮಾಧೀನವಾದ ಇರುವಿಕೆಯಿರುವದೇ ಹೊರತು ಸ್ವತಂತ್ರವಾದ ಇರವು ಇಲ್ಲವೆಂದೂ, ಆದ್ದರಿಂದಲೇ ಬೀಜಾಂಕುರರೂಪದಿಂದ ವ್ಯಕ್ತಾವ್ಯಕ್ತವೆನಿಸಿರುವ ಈ ಜಗತ್ತೆಲ್ಲವೂ ತನ್ನ ರೂಪದಿಂದ ಮಿಥ್ಯೆಯೆಂದೂ ಆತ್ಮರೂಪದಿಂದಲೇ ಸತ್ಯವೆಂದೂ **ವೇದಾಂತಿಗಳ ಹೇಳಿಕೆ.**

**ಪ್ರಧಾನವು ಒಂದೇ ಎಂಬುದು ಸಾಂಖ್ಯರ ಎರಡನೆಯ ನಂಬಿಕೆ.** ಜಗತ್ತಿನ ಅವ್ಯಾಕೃತಸ್ಥಿತಿಯು ಒಂದೇ ಎಂಬುದು ವೇದಾಂತಿಗಳಿಗೂ ಸಮ್ಮತವೇ. ಆದರೂ ಅದಕ್ಕೆ ನಿಜವಾದ ಇರವು ಇಲ್ಲವೇಇಲ್ಲವಾದ್ದರಿಂದ **ಅದು ಒಂದೊ, ಅನೇಕವೊ- ಎಂಬುದನ್ನು ನಿರ್ಣಯಮಾಡುವದರಲ್ಲಿ ವೇದಾಂತಿಗಳಿಗೆ ಅಷ್ಟು ಆದರವಿಲ್ಲ.**[1]

1. ಪ್ರಕೃತಿಯು ಒಬ್ಬೊಬ್ಬ ಜೀವನಿಗೂ ಒಂದೊಂದು ಬೇರೆ ಇದೆ ಎಂದು ವಾಚಸ್ಪತಿಮಿಶ್ರರು ಶಾಂಕರಭಾಷ್ಯಕ್ಕೆ ಬರೆದಿರುವ ಭಾಮತೀವ್ಯಾಖ್ಯಾನದಲ್ಲಿದೆ.

**ಪ್ರಧಾನವು ಭೋಗಮೋಕ್ಷಗಳೆಂಬ ಉದ್ದೇಶವುಳ್ಳದ್ದಾಗಿರುವದು; ಅದು ತನಗಿಂತ ಬೇರೆಯಾಗಿರುವ ಪುರುಷನಿಗಾಗಿ ಕೆಲಸ ಮಾಡುತ್ತಿರುವದು– ಎಂಬಿವು ಸಾಂಖ್ಯರ ಮೂರನೆಯ ನಾಲ್ಕನೆಯ ಮೂಲಿಕಾರ್ಥಗಳು. ವೇದಾಂತಿಗಳು ಇದನ್ನು ಒಪ್ಪುವದಿಲ್ಲ.** ಆತ್ಮನಿಗೆ ಅನಾತ್ಮಸಂಬಂಧವು ನಿಜವಾಗಿ ಇಲ್ಲವೇ ಇಲ್ಲ, ಅನಾತ್ಮವು ಜಡವಸ್ತುವಾದ್ದರಿಂದ ಇದಕ್ಕೆ "ಇಂಥವನಿಗೆ ಭೋಗವನ್ನು ಕೊಡಬೇಕು, ಇಂಥವನಿಗೆ ಮೋಕ್ಷವನ್ನು ಕೊಡಬೇಕು"– ಎಂಬ ಉದ್ದೇಶವಿರುವದು ಒಪ್ಪುವ ಮಾತಲ್ಲ– ಎಂದು ಇವರು ಹೇಳುತ್ತಾರೆ. ಇದಲ್ಲದೆ ಪ್ರಧಾನದಲ್ಲಿ ತೋರುತ್ತಿರುವ ಪರಿಣಾಮಗಳು ಪುರುಷನಿಗಾಗಿ ಎಂದು ಹೇಳುವದರಲ್ಲಿ ಪ್ರಧಾನವು ತನಗೆತಾನೇ ಮಾರ್ಪಡುತ್ತಿರುವದೆಂಬ ತಾತ್ಪರ್ಯವು ಅಡಗಿರುತ್ತದೆ. ಇದೂ ಸರಿಯಲ್ಲ. "ನದಿಯ ದಡವು ಇಷ್ಟರಲ್ಲಿಯೇ ಬೀಳುತ್ತೇನೆನ್ನುತ್ತದೆ" ಎಂದು ಉಪಚಾರಕ್ಕಾಗಿ ಹೇಳುವದುಂಟು; ಆದರೆ ಬೀಳುವದಕ್ಕಾಗಲಿ ಬಿಡುವದಕ್ಕಾಗಲಿ ನಿಜವಾಗಿ ಇಚ್ಛೆಯಾಗಲಿ ಸ್ವಾತಂತ್ರ್ಯವಾಗಲಿ ನದಿಯ ದಡಕ್ಕೆ ಉಂಟೆಂದು ಯಾರೂ ನಂಬುವದಿಲ್ಲ. ಅದರಂತೆ ಪ್ರಧಾನದ ಪರಿಣಾಮದಿಂದ ಪುರುಷನಿಗೆ ಭೋಗಮೋಕ್ಷಗಳು ಆಗಬಹುದು; ಆದರೆ ಪ್ರಧಾನವು ಆ ಭೋಗಮೋಕ್ಷಗಳನ್ನು ಉದ್ದೇಶಪೂರ್ವಕವಾಗಿ ಪುರುಷನಿಗೆ ಮಾಡಿಕೊಡುತ್ತದೆಯೆನ್ನುವದು ಎಂದಿಗೂ ಸರಿಯಲ್ಲ. ಇಷ್ಟಕ್ಕೆ ಸಾಂಖ್ಯರು ಒಪ್ಪುವದಾದರೆ 'ಅನಾತ್ಮವು ತನಗೋಸ್ಕರ ಕೆಲಸಮಾಡುವದಿಲ್ಲ, ತನಗಿಂತ ಬೇರೆಯಾದ ಪುರುಷನಿಗೋಸ್ಕರ ಕೆಲಸಮಾಡುತ್ತಿದೆ' ಎಂಬ ಮಾತಿಗೆ ನಾವೂ ಒಪ್ಪಿಗೆಕೊಡುತ್ತೇವೆ– ಎಂದು ವೇದಾಂತಿಗಳು ಹೇಳುವರು.

**ಪ್ರಧಾನವು ಪುರುಷನಿಗಿಂತ ಬೇರೆಯಾದ ಪದಾರ್ಥವು ಎಂದು ಸಾಂಖ್ಯರು ಹೇಳುತ್ತಾರೆ.** ಇದು ಪ್ರಕೃತಿಯ ವಿಷಯದ ಐದನೆಯ ಮೂಲಿಕಾರ್ಥವು. **ಈ ಮೂಲಿಕಾರ್ಥವನ್ನೂ ವೇದಾಂತಿಗಳು ಒಪ್ಪುವದಿಲ್ಲ.** ಅವರ ದೃಷ್ಟಿಯಿಂದ ನೋಡಿದರೆ ಆತ್ಮನಿಗಿಂತ ಬೇರೆಯಾಗಿ ಸ್ವತಂತ್ರವಾದ ಇರವು ಯಾವ ವಸ್ತುವಿಗೂ ಇರುವದಿಲ್ಲ.

ಬಿಸಿನೀರಿಗೆ ಬಿಸಿಯು ಬೆಂಕಿಯಿಂದ ಬಂದಿರುವಂತೆ ಅನಾತ್ಮವಸ್ತುವಿಗೆ ಇರವು ಆತ್ಮನಿಂದ ಬಂದಿರುತ್ತದೆ; ನೀರು ಸ್ವಭಾವವಾಗಿ ತಣ್ಣಗೇ ಇರುವದು,

ಅವರಲ್ಲಿ ತೋರುವ ಬಿಸಿಯು ಬೆಂಕಿಯ ಧರ್ಮವೇ ಹೊರತು ನೀರಿನ ಹುಟ್ಟು ಗುಣವಲ್ಲ. ಇವರಂತೆ ಪ್ರಕೃತಿಯ ವಿಕಾರವಾದ ಮಹದಾದಿಗಳಲ್ಲಿ ನೈಜವಾಗಿ ಜ್ಞಾನವಿರುವದಿಲ್ಲ; ಚೈತನ್ಯವು ಪುರುಷನ ಧರ್ಮವೇ, ಪುರುಷನ ಸಂಬಂಧ ದಿಂದ ಪ್ರಕೃತಿಯಲ್ಲಿಯೂ ಚೈತನ್ಯವು ತೋರುತ್ತದೆ- ಎಂದು ಸಾಂಖ್ಯರು ಹೇಳು ತ್ತಾರೆ. ಇದನ್ನು ವೇದಾಂತಿಗಳೂ ಒಪ್ಪುತ್ತಾರೆ. ಅನಾತ್ಮದಲ್ಲಿ ತೋರುವ ಚೈತನ್ಯವು ಭ್ರಾಂತಿಯಿಂದ ತೋರುತ್ತದೆಯೇ ಹೊರತು ನಿಜವಾಗಿ ಅದರಲ್ಲಿ ಚೈತನ್ಯವೇನೂ ಇರುವದಿಲ್ಲವೆಂಬುದು ಇಬ್ಬರಿಗೂ ಸಮ್ಮತ.

ಇಲ್ಲಿಯವರೆಗೆ ಪ್ರಕೃತಿಯ ಮೂಲಿಕಾರ್ಥಗಳ ವಿಚಾರವಾಯಿತು. ಇನ್ನು ಪುರುಷರ ವಿಷಯದಲ್ಲಿಯೂ ಸಾಂಖ್ಯರು ಐದು ಮೂಲಿಕಾರ್ಥಗಳನ್ನು ಅಂಗೀ ಕರಿಸಿರುತ್ತಾರೆ. ಅವುಗಳನ್ನು ವಿಚಾರಿಸಿದರೂ ಸಾಂಖ್ಯವೇದಾಂತಗಳಿಗೆ ಬಹಳ ಹೆಚ್ಚಿನ ತಾರತಮ್ಯವು ಕಂಡುಬರುವದು.

ಹೇಗೆಂದರೆ: **ಪುರುಷನು ಕರ್ತೃವಲ್ಲ, ಇವನಲ್ಲಿ ತೋರುವ ಕ್ರಿಯೆಯು ಪ್ರಧಾನಕ್ಕೇ ಸೇರಿರುವದು- ಎಂಬುದು ಸಾಂಖ್ಯರ ಮತ.** ಇದು ಪುರುಷನ ವಿಷಯವಾದ ಮೊದಲನೆಯ ಮೂಲಿಕಾರ್ಥವು. ಪುರುಷನು ಕರ್ತೃವಲ್ಲವೆಂಬುದು ವೇದಾಂತಿಗಳಿಗೂ ಇಷ್ಟವಾದದ್ದೇ; ಆದರೆ ನಿಜವಾಗಿ ಪ್ರಧಾನವೆಂಬ ವಸ್ತುವೇ ಇರುವದಿಲ್ಲವಾದ್ದರಿಂದ ಕರ್ತೃತ್ವವು ಪ್ರಧಾನಕ್ಕೆ ಸೇರಿದ್ದೆಂಬುದೂ ಸರಿಯಲ್ಲ. ಆದ್ದರಿಂದ ಕರ್ತೃತ್ವವು ಯಾವದಕ್ಕಾದರೂ ಸೇರಿದ್ದೆಂಬುದರಲ್ಲಿ ವೇದಾಂತಿಗಳಿಗೆ ಅಷ್ಟು ತಾತ್ಪರ್ಯವಿಲ್ಲ. **ಕರ್ತೃತ್ವ ವೆಂಬುದೇ ಅಜ್ಞಾನದಿಂದ ಹುಟ್ಟುಗಟ್ಟಿದ್ದೆಂಬುದು ವೇದಾಂತದ ಕೊನೆಯ ಸಿದ್ಧಾಂತವು.**

**ಪ್ರಕೃತಿಯ ಸಂಬಂಧವೂ ಪ್ರಕೃತಿಯಿಂದ ಅಗಲುವದೂ ಪುರುಷನಿಗುಂಟೆಂದೂ ಇದರಿಂದ ಭೋಕ್ತೃತ್ವವೂ, ವಿಷಯಾನುಭವ ಮತ್ತು ಮೋಕ್ಷ- ಇವುಗಳೂ ಪುರುಷನಿಗೆ ಆಗುವವೆಂದೂ ಸಾಂಖ್ಯರು ಹೇಳುತ್ತಾರೆ.** ಇವು ಪುರುಷವಿಷಯಕವಾದ ಎರಡನೆಯ ಮತ್ತು ಮೂರನೆಯ ಮೂಲಿಕಾರ್ಥಗಳು. ಇವನ್ನು ವೇದಾಂತಿಗಳು ಒಪ್ಪು ವದಿಲ್ಲ. ಅವಿವೇಕದಿಂದ ಎಂದರೆ ಸರಿಯಾಗಿ ಬಿಂಗಡಿಸಿ ತಿಳಿಯದ್ದರಿಂದ ಪುರುಷ

ನಲ್ಲಿ ಕರ್ತೃತ್ವವು ತೋರುವದೆಂದು ಸಾಂಖ್ಯರು ಹೇಳುವಂತೆಯೇ ಅವಿವೇಕ ದಿಂದಲೇ ಪುರುಷನಲ್ಲಿ ಭೋಕ್ತೃತ್ವವೂ ತೋರುವದು ; ಪುರುಷನಿಗೆ ಪ್ರಕೃತಿಯ ಸಂಬಂಧವೂ ಇಲ್ಲ, ಆ ಸಂಬಂಧವು ತಪ್ಪುವದೆಂಬುದೂ ಇಲ್ಲ. ನಿಜವಾಗಿ **ಬಂಧವಾಗಲಿ, ಮೋಕ್ಷವಾಗಲಿ ಆತ್ಮನಿಗೆ ಇಲ್ಲವೇಇಲ್ಲ- ಎಂಬುದು ವೇದಾಂತದ ಸಿದ್ಧಾಂತವು.**

**ಪುರುಷರು ಅನೇಕರೆಂಬುದು ಸಾಂಖ್ಯರ ನಾಲ್ಕನೆಯ ಮೂಲಿ ಕಾರ್ಥ**ವಾಗಿದೆ. ಇದನ್ನು ವೇದಾಂತಿಗಳು ಒಪ್ಪುವದೇ ಇಲ್ಲ. ಪುರುಷನು ಚೈತನ್ಯಮಾತ್ರನು, ಎಂದರೆ ಬರಿಯ ಅರಿವಿನ ಸ್ವರೂಪದವನು. ಅವನಲ್ಲಿ ಮತ್ತೆ ಯಾವ ವಿಶೇಷಗಳೂ ಇಲ್ಲ- ಎಂದು ಸಾಂಖ್ಯರು ಹೇಳುತ್ತಾರೆ. ಇಂಥ ಪುರುಷರು ಅನೇಕರೆಂದರೆ ಒಬ್ಬೊಬ್ಬ ಆತ್ಮನಲ್ಲಿ ಒಂದೊಂದು ವಿಶೇಷವನ್ನು ಒಪ್ಪಿಕೊಳ್ಳ ಬೇಕಾಗುವದು ; ಇದು ಸಾಂಖ್ಯರ ಒಪ್ಪಿಗೆಗೆ ವಿರೋಧ, ಯುಕ್ತಿಗೆ ಹೊಂದು ವದಿಲ್ಲ, ಅನುಭವಕ್ಕೂ ವಿರುದ್ಧವಾಗಿದೆ. ಆದ್ದರಿಂದ ಶ್ರುತಿಯಲ್ಲಿ ಹೇಳಿರುವಂತೆ **ಪುರುಷನು ಒಬ್ಬನೆಂದೂ ಅದ್ವಿತೀಯನೆಂದೂ ಒಪ್ಪುವದೇ ನ್ಯಾಯವಾದದ್ದು- ಎಂದು ವೇದಾಂತಿಗಳ ಅಭಿಪ್ರಾಯ**ವಿರುವದು.

ಪ್ರಕೃತಿಯ ಸಂಬಂಧವು ತಪ್ಪಿದಮೇಲೂ **ಪುರುಷನಿಗೆ ಪ್ರಾರಬ್ಧಶೇಷ** ದಿಂದ ಕೆಲವು ಕಾಲದವರೆಗೆ ಶರೀರದ ಸಂಬಂಧವಿರುವದು ; ಕುಂಬಾರನು ತಿರುಗಿಸಿ ಬಿಟ್ಟಮೇಲೂ ತಿರುಗುತ್ತಿರುವ ತಿಗುರಿಯಂತೆ ಸ್ವಲ್ಪಕಾಲದವರೆಗೆ ಈ ಶರೀರದ ವ್ಯಾಪಾರವು ಪುರುಷನಲ್ಲಿದ್ದುಕೊಂಡಿರುವದು ; ಆಮೇಲೆ ದೇಹವು ಬಿದ್ದುಹೋಗಿ ಮರಣಾನಂತರದಲ್ಲಿ ಕೈವಲ್ಯವಾಗುವದು- ಎಂದು ಸಾಂಖ್ಯರು ಹೇಳುತ್ತಾರೆ. ಇದು ಪುರುಷವಿಷಯಕವಾದ **ಐದನೆಯ ಮೂಲಿಕಾರ್ಥವು.** ವೇದಾಂತಿಗಳು ವ್ಯಾವಹಾರಿಕದೃಷ್ಟಿಯಿಂದ ಈ ಮಾತನ್ನು ಒಪ್ಪುವರು. ಹೇಗೆಂದರೆ, ಆತ್ಮಾನಾತ್ಮಗಳನ್ನು ಒಂದನ್ನೊಂದರಲ್ಲಿ ಆರೋಪಿಸುವದಕ್ಕೆ ವೇದಾಂತಿಗಳು ಅವಿದ್ಯೆಯೆಂಬ ಹೆಸರನ್ನು ಕೊಟ್ಟಿರುತ್ತಾರೆ. ಅವಿದ್ಯೆಯಿರು ವಾಗ ಜೀವ, ಈಶ್ವರ, ಫಲ, ಲೋಕಾಂತರಪ್ರಾಪ್ತಿ, ಕರ್ಮ, ಕರ್ತೃತ್ವ, ಭೋಕ್ತೃತ್ವ, ಉಪಾಸನೆ, ಕ್ರಮಮುಕ್ತಿ- ಇವೆಲ್ಲಾ ನಿಜವಾಗಿಯೇ ತೋರು ವವು. ಆ ದೃಷ್ಟಿಯಲ್ಲಿ ನೋಡಿದರೆ ಜ್ಞಾನವಾದಮೇಲೂ ಪ್ರಾರಬ್ಧಭೋಗ ವಿರುವದು ; ಎಂದರೆ ಜ್ಞಾನಿಯ ಶರೀರವು ಕೆಲವುಕಾಲ ಕೆಲಸದ ಫಲವನ್ನು

ಅನುಭವಿಸುತ್ತಿದ್ದು ಆಮೇಲೆ ಬಿದ್ದುಹೋಗುವದು. ಆದರೆ ಮೇಲೆ ಹೇಳಿದ ಅವಿದ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಉತ್ತಮವಾದ ಶಾಸ್ತ್ರೀಯದೃಷ್ಟಿಯಿಂದ ನೋಡಿದರೆ ಶರೀರವು ಆತ್ಮನಿಗಿರುವದೆಂಬುದೇ ಸರಿಯಲ್ಲ; ಅದರ ಸಂಬಂಧವು ಜ್ಞಾನವಾಗುವ ಪೂರ್ವದಲ್ಲಿಯೂ ಆತ್ಮನಿಗಿಲ್ಲವೆಂಬುದೇ ಸರಿಯಾದ ಜ್ಞಾನವು. ಆದ್ದರಿಂದ ಈ ನಿಜವಾದ ತಿಳಿವಳಿಕೆಯುಂಟಾದ ಜ್ಞಾನಿಗಳಿಗೆ ಪ್ರಾರಬ್ಧಕರ್ಮವೂ ಇಲ್ಲ; ದೇಹಪಾತವಾದ ಮೇಲೆ ಕೈವಲ್ಯವಾಗುವದೆಂಬುದೂ ಸರಿಯಲ್ಲ. **ಜ್ಞಾನವಾಗುವಾಗಲೇ ಮುಕ್ತಿ**ಯಾಗಿಬಿಡುವದು ; ಎಂದರೆ ಅನಾತ್ಮವೆಲ್ಲ ಮಾಯಿಕವಾದ್ದರಿಂದ ಅದರ ಸಂಬಂಧವು ಆತ್ಮನಾದ ತನಗೆ ಎಂದಿಗೂ ಇರಲಿಲ್ಲವೆಂಬುದು ನೇರಾಗಿ ಗೊತ್ತಾಗಿಬಿಡುತ್ತದೆ- **ಎಂದು ವೇದಾಂತಿಗಳು** ಹೇಳುವರು.

(೧) **ಸಾಂಖ್ಯರು ದ್ವೈತಿಗಳು,** ಎಂದರೆ ಆತ್ಮ, ಅನಾತ್ಮ- ಇವುಗಳಲ್ಲಿ ನಿಜವಾದ ಭೇದವನ್ನು ಒಪ್ಪಿಕೊಳ್ಳುವವರು ; ಪುರುಷರು ಅನೇಕರೆಂದು ಒಪ್ಪಿಕೊಳ್ಳುವವರು. **ವೇದಾಂತಿಗಳು ಅದ್ವೈತಿಗಳು,** ಎಂದರೆ ಆತ್ಮವೊಂದೇ ಸತ್ಯವೆಂದೂ ಮಿಕ್ಕದ್ದು ನಿಜವಾಗಿಲ್ಲದೆ ತಪ್ಪುತಿಳಿವಳಿಕೆಯಿಂದ ತೋರಿಕೊಳ್ಳುವದೆಂದೂ ಹೇಳುವವರು. (೨) **ಸಾಂಖ್ಯರು ತಾರ್ಕಿಕರು,** ಎಂದರೆ ಪುರುಷ, ಪ್ರಕೃತಿ, ಇವುಗಳ ಸಂಬಂಧ- ಇವುಗಳನ್ನು ತರ್ಕದಿಂದ ಎಂದರೆ ಅನುಮಾನದಿಂದ ಊಹಿಸಿ ಸಿದ್ಧಮಾಡುವವರು. **ವೇದಾಂತಿಗಳು ಸ್ವಯಂಸಿದ್ಧಾತ್ಮವಾದಿಗಳು,** ಎಂದರೆ ಆತ್ಮನು ಸ್ವಯಂಸಿದ್ಧನಾಗಿರುವನು, ಅನುಮಾನಾದಿಪ್ರಮಾಣಗಳಿಗಿಂತ ಮೊದಲೇ ಸಿದ್ಧವಾಗಿರುವ ವಸ್ತು, ಅವನನ್ನು ಲಕ್ಷಣ ಪ್ರಮಾಣಗಳಿಂದ ಸಿದ್ಧಮಾಡಬೇಕಾದ ಅಗತ್ಯವೇನೂ ಇಲ್ಲ- ಎನ್ನುವವರು. (೩) **ಸಾಂಖ್ಯರು ಪ್ರಮಾಣತ್ರಯವಾದಿಗಳು,** ಎಂದರೆ ಪ್ರತ್ಯಕ್ಷಾನುಮಾನ ಶಬ್ದಗಳೆಂಬ ಮೂರು ಪ್ರಮಾಣಗಳನ್ನು ಒಪ್ಪಿ ಪ್ರಮಾಣಗಳಿಂದ ಶಾಸ್ತ್ರಾರ್ಥವನ್ನು ನಿರ್ಣಯಮಾಡುವವರು. ಆದರೆ ವೇದಾಂತಿಗಳು **ಅನುಭವವಾದಿಗಳು,** ಆತ್ಮನನ್ನು ಅನುಭವದಿಂದಲೇ ಅರಿತುಕೊಳ್ಳಬೇಕಾಗಿದೆ ಎನ್ನುವವರು. ವ್ಯವಹಾರದಲ್ಲಿ ಯಥಾಸಂಭವಪ್ರಮಾಣಸಂಖ್ಯಾವಾದಿಗಳು, ಎಂದರೆ ಪರಮಾರ್ಥವು ನಿಜವಾಗಿ ಯಾವ ಪ್ರಮಾಣಕ್ಕೂ ವಿಷಯವಲ್ಲವೆಂದೂ ಯಾವಯಾವ ದರ್ಶನಗಳಲ್ಲಿ ಎಷ್ಟೆಷ್ಟು ಪ್ರಮಾಣಗಳನ್ನು ಅಂಗೀಕರಿಸಿದೆಯೋ ಅಷ್ಟಷ್ಟು ಪ್ರಮಾಣಗಳನ್ನು ಒಪ್ಪಿಕೊಂಡು ಅವರವರ ದರ್ಶನಗಳಲ್ಲಿರುವ ಅಸಾರತೆಯನ್ನು ತೋರಿಸಿ

ಕೊಡುವೆವೆಂದೂ ಹೇಳುವವರು. (೪) **ಸಾಂಖ್ಯರು ಪರೋಕ್ಷಾರ್ಥವಿಷಯಕ ಶಾಸ್ತ್ರವಾದಿಗಳು;** ಎಂದರೆ ನೇರಾಗಿ ಅನುಭವಕ್ಕೆ ಬರದೆ ಇರುವ ವಿಷಯದಲ್ಲಿ ದೊಡ್ಡವರ ಮಾತು ಅಥವಾ ಶ್ರುತಿಯು ಪ್ರಮಾಣವಾಗುವದೆನ್ನುವವರು. **ವೇದಾಂತಿಗಳು ಅಪರೋಕ್ಷಾರ್ಥದ್ಯೋತಕಶಾಸ್ತ್ರವಾದಿಗಳು;** ಎಂದರೆ ಆತ್ಮವಸ್ತುವು ಅಪರೋಕ್ಷವಾಗಿ ಅಪ್ರಮೇಯವಾಗಿರುವದರಿಂದ ಯಾವ ಪ್ರಮಾಣವೂ ಆತ್ಮಸಿದ್ಧಿಗೆ ಅಗತ್ಯವಿಲ್ಲವಾದರೂ ಶಾಸ್ತ್ರವು ಆತ್ಮನ ಧರ್ಮವಲ್ಲದ್ದನ್ನು ತಿಳಿಸುವದಕ್ಕೂ ಪ್ರಮಾಣಪ್ರಮೇಯವ್ಯವಹಾರವು ತಪ್ಪುತಿಳಿವಳಿಕೆಯಿಂದಾಗಿರುವದೆಂದೂ ಆತ್ಮವು ಈ ವ್ಯವಹಾರವನ್ನು ಮೀರಿರುವದೆಂದೂ ತಿಳಿಸುವದಕ್ಕೂ ಉಪಯೋಗಿಸುವ ಪ್ರಮಾಣ ಎನ್ನುವವರು. (೫) **ಸಾಂಖ್ಯರು ನಿರೀಶ್ವರವಾದಿಗಳು,** ಎಂದರೆ ನಿತ್ಯಶುದ್ಧಬುದ್ಧಮುಕ್ತಸ್ವಭಾವನಾದ ಸರ್ವಜ್ಞನಾದ ಸರ್ವಶಕ್ತನಾದ ಈಶ್ವರನು ಜಗತ್ತನ್ನು ಸೃಷ್ಟಿಸ್ಥಿತಿಲಯಗಳಿಂದ ಆಳುತ್ತಿರುವನೆಂಬುದನ್ನು ಒಪ್ಪದೆ ಇರುವವರು; **ವೇದಾಂತಿಗಳು ವ್ಯಾವಹಾರಿಕೇಶ್ವರವಾದಿಗಳು,** ಎಂದರೆ ನಿಜವಾಗಿ ನೋಡಿದರೆ ಆತ್ಮವಸ್ತುವೊಂದೇ ಇರುತ್ತಿರುವದಾದರೂ ಈ ಜಗತ್ತಿನಲ್ಲಿ ಕಾಣುತ್ತಿರುವ ನಾಮರೂಪಗಳು ವ್ಯವಹಾರದಲ್ಲಿ ತೋರುತ್ತಿರುವವರೆಗೆ ಶರೀರೇಂದ್ರಿಯಗಳ ಸಂಬಂಧವುಳ್ಳ ಜೀವರೂ ಜಗದಾತ್ಮನಾದ ಪರಮೇಶ್ವರನೂ ಬೇರೆಬೇರೆಯಾಗಿ ಇದಾರೆಂದು ವ್ಯವಹಾರದೃಷ್ಟಿಯಿಂದ ಒಪ್ಪಿಕೊಳ್ಳಬೇಕೆಂದೂ ವೇದದಲ್ಲಿ ಉಪಾಸನೆಯನ್ನೂ ಕರ್ಮವನ್ನೂ ಈ ದೃಷ್ಟಿಯಿಂದಲೇ ವಿಧಿಸಿದೆಯೆಂದೂ ಹೇಳುವವರು. (೬) **ಸಾಂಖ್ಯರು ಪರಿಣಾಮವಾದಿಗಳು,** ಎಂದರೆ ಪ್ರಧಾನವು ನಿಜವಾಗಿ ಜಗದ್ರೂಪವಾಗಿ ಪರಿಣಾಮವಾಗುವದೆಂದು ಹೇಳುವವರು; **ವೇದಾಂತಿಗಳು ವಿವರ್ತವಾದಿಗಳು,** ಎಂದರೆ ಆತ್ಮನಲ್ಲಿ ಜಗತ್ತು ಅವಿದ್ಯೆಯಿಂದ ಕಲ್ಪಿತವಾಗಿರುವದೆಂದೂ ಈ ಅವಿದ್ಯಾದೃಷ್ಟಿಯಿಂದಾದ ವ್ಯವಹಾರದಲ್ಲಿ ಪರಿಣಾಮವೇ ಮುಂತಾದವುಗಳು ಉಂಟೆಂದೂ ಹೇಳುವವರು. **ಸಾಂಖ್ಯವೇದಾಂತಿಗಳಿಬ್ಬರೂ ಸತ್ಕಾರ್ಯವಾದಿಗಳು;** ಎಂದರೆ ಇಲ್ಲದ್ದು ಹುಟ್ಟದು, ಇದ್ದದ್ದು ನಾಶವಾಗದು- ಎನ್ನುವವರು. ಆದರೆ ಸಾಂಖ್ಯರಿಗೆ ಕಾರ್ಯಕಾರಣಗಳೆರಡೂ ಪರಮಾರ್ಥಸತ್ಯವು. ವೇದಾಂತಿಗಳ ಮತದಲ್ಲಿಯೋ ಎಂದರೆ ಕಾರ್ಯಕಾರಣಗಳೆರಡೂ ಪರಮಾರ್ಥವಾಗಿರುವದಿಲ್ಲ. ಕಾರ್ಯವು ಕಾರಣಕ್ಕಿಂತ ಭಿನ್ನವಾಗಿರುವದಿಲ್ಲ; ಅದು ಕಾರಣರೂಪದಲ್ಲಿ ಸತ್ಯವು, ಕಾರ್ಯ

ರೂಪದಲ್ಲಿ ಮಿಥ್ಯೆಯೇ. ಕಾರಣವೇ ಅವಿದ್ಯೆಯಿಂದ ಕಾರ್ಯರೂಪದಲ್ಲಿ ತೋರಿ ಕೊಳ್ಳುತ್ತಿರುವದರಿಂದಲೂ ಕಾರ್ಯತ್ವವು ಮಿಥ್ಯೆಯಾದರೆ ಕಾರಣತ್ವವೂ ಮಿಥ್ಯೆಯಾಗಬೇಕಾಗುವದರಿಂದಲೂ ಕಾರ್ಯಕಾರಣರೂಪವಾದ ವಿಶೇಷವೇ ಇಲ್ಲದ ಚೈತನ್ಯವಸ್ತುವೊಂದೇ ಪರಮಾರ್ಥವೆಂಬುದು ಇವರ ಮತ.

ಹೀಗೆ ಸಾಂಖ್ಯರಿಗೂ ವೇದಾಂತಿಗಳಿಗೂ ಮುಖ್ಯವಾದ ಕೆಲವು ವಿಚಾರಗಳಲ್ಲಿ ಹೆಚ್ಚುಕಡಿಮೆ ಇರುವದು. "ಆತ್ಮನು ಒಬ್ಬನೆಂದಾದರೆ ಪುರುಷರು ಅನೇಕರಾಗಿ ಕಾಣುವರಲ್ಲ! ಒಬ್ಬನಿಗೆ ಬಂಧ, ಮತ್ತೊಬ್ಬನಿಗೆ ಮೋಕ್ಷ- ಹೀಗಿರುವದಲ್ಲ! ಈಶ್ವರನೊಬ್ಬನಿದ್ದರೆ ಅವನಿಗೆ ವೈಷಮ್ಯವೂ ನಿರ್ದಯತ್ವವೂ ದೋಷವಾಗಿಬಿಡುವವಲ್ಲ! ಶಾಸ್ತ್ರ, ಶಿಷ್ಯ, ಗುರು- ಮುಂತಾದ ಭೇದಗಳಿಗೇನು ಗತಿ?" ಎಂದು ಮುಂತಾಗಿ ಸಾಂಖ್ಯರು ವೇದಾಂತಿಗಳ ಸಿದ್ಧಾಂತದ ಮೇಲೆ ಆಕ್ಷೇಪವನ್ನು ಮಾಡುವರು. "ಅವಿದ್ಯಾದೃಷ್ಟಿಯಿಂದ ಭೇದವನ್ನೂ ಪರಮಾರ್ಥ ದೃಷ್ಟಿಯಿಂದ ಅಭೇದವನ್ನೂ ನಾವು ಹೇಳುವದರಿಂದ ನಮ್ಮ ಸಿದ್ಧಾಂತದಲ್ಲಿ ಯಾವ ದೋಷವೂ ಬರುವದಿಲ್ಲ; ಹಾಗೆ ನೋಡಿದರೆ ಸಾಂಖ್ಯಸಿದ್ಧಾಂತದಲ್ಲಿ ಈ ಎಲ್ಲಾ ದೋಷಗಳೂ ಬರುವವು" ಎಂದು ವೇದಾಂತಿಗಳು ಹೇಳುವರು.

ಈ ಎರಡು ದರ್ಶನಗಳಿಗೂ ಇಷ್ಟು ಹೆಚ್ಚುಕಡಿಮೆಗಳಿದ್ದರೂ **ಸಾಂಖ್ಯವು ವೇದಾಂತಕ್ಕೆ ತೀರ ಹತ್ತಿರವಿರುವ ದರ್ಶನ**ವಾಗಿರುವದು. ಇವರು ಹೇಳಿರುವ ಅಧ್ಯಾತ್ಮವಿಭಾಗವೇ ವೇದಾಂತಿಗಳಿಗೂ ವ್ಯವಹಾರದಲ್ಲಿ ಸಮ್ಮತವಾಗಿರುತ್ತದೆ. ಶರೀರ, ಇಂದ್ರಿಯ, ಮನಸ್ಸು- ಇವುಗಳ ವಿಷಯದಲ್ಲಿ ಸಾಂಖ್ಯರು ಮಾಡಿರುವ ವಿಚಾರವನ್ನೆಲ್ಲ ಪೂರ್ಣವಾಗಿ ವೇದಾಂತಗ್ರಂಥಗಳಲ್ಲಿ ತೆಗೆದುಕೊಂಡಿರುವದು ಕಂಡುಬರುತ್ತದೆ. ಆತ್ಮ ಮತ್ತು ಅನಾತ್ಮ- ಇವುಗಳನ್ನು ವಿಂಗಡಿಸಿಕೊಳ್ಳುವದಕ್ಕೆ ಈ ಶಾಸ್ತ್ರದ ಕ್ರಮವು ವೇದಾಂತಿಗಳಿಗೆ ಬಹಳ ಉಪಯೋಗವಾಗಿರುವದು. ಆತ್ಮನಿಗೆ ಯಾವ ಅನಾತ್ಮದ ಸಂಬಂಧವೂ ನಿಜವಾಗಿಲ್ಲವೆಂಬುದು ಸಾಂಖ್ಯಪ್ರಕ್ರಿಯೆಯಿಂದ ಸಿದ್ಧವಾದ ಹಾಗೆ ಮತ್ತೆಯಾವ ದರ್ಶನದ ವಿಚಾರ ಕ್ರಮದಿಂದಲೂ ಸಿದ್ಧವಾಗುವದಿಲ್ಲ. ಇರುವದು ಹೋಗುವದಿಲ್ಲ, ಇಲ್ಲದ್ದು ಹುಟ್ಟುವದಿಲ್ಲ- ಎಂಬ ಸತ್ಕಾರ್ಯವಾದದ ಮೂಲಮಂತ್ರವು ಸಾಂಖ್ಯರದು; ಇದರ ಬಲದ ಮೇಲೆಯೇ ಆತ್ಮನು ನಿತ್ಯಶುದ್ಧಬುದ್ಧಮುಕ್ತಸ್ವಭಾವನೆಂಬುದನ್ನು ವೇದಾಂತಿಗಳು ಗೊತ್ತುಪಡಿಸುವರು. ವೇದಾಂತದಲ್ಲಿರುವ ಅನೇಕ ಪಾರಿಭಾಷಿಕಶಬ್ದಗಳು ಸಾಂಖ್ಯಶಾಸ್ತ್ರದವುಗಳಾಗಿವೆ. ಈ ರೀತಿಯಲ್ಲಿ ನೋಡಿದರೆ ಸಾಂಖ್ಯಶಾಸ್ತ್ರವು ವೇದಾಂತಜಿಜ್ಞಾಸುಗಳಿಗೆ ಬಹಳ ಉಪಯೋಗಕರವಾಗಿರುವದು.

# ಶಬ್ದಾನುಕ್ರಮಣಿಕೆ

(ಸಂಖ್ಯೆಗಳು ಪುಟವನ್ನು ಸೂಚಿಸುತ್ತವೆ.)


ಅಧಿದೈವ ೧೫
ಅಧಿಭೂತ ೧೫
ಅಧ್ಯಾತ್ಮ ೧೫
ಅಂಧತಾಮಿಸ್ರ ೨೧
ಅನುಗ್ರಹಸರ್ಗ ೨೯
ಅನುಮಾನ ೩೨
ಅಭಿಬುದ್ಧಿ ೧೭
ಅವಿದ್ಯೆ ೨೧
ಅಶಕ್ತಿ ೨೨
ಅಸಿದ್ಧಿ ೨೬
ಅಹಂಕಾರ ೫
ಆಪ್ತ ೩೩
ಇಂದ್ರಿಯ ೭
ಕರ್ಮಯೋನಿ ೧೭
ಕರ್ಮಾತ್ಮ ೨೦
ಗುಣಗಳು ೧೨
ತತ್ತ್ವ ೧
ತನ್ಮಾತ್ರೆ ೫
ತಮಸ್ಸು ೨೧
ತಾಮಿಸ್ರ ೨೧
ತುಷ್ಟಿ ೨೩
ತೈಜಸ ೨೦
ದುಃಖತ್ರಯ ೩೪
ಧೃತಿ ೧೮
ಪಂಚಶಿಖ ೧೬
ಪರಮಪುರುಷಾರ್ಥ ೩೬
ಪರಿಣಾಮ ೧೩
ಪುರುಷ ೧೦
ಪ್ರಕೃತಿ ೨
ಪ್ರತಿಸಂಚರ ೧೩
ಪ್ರತ್ಯಕ್ಷ ೩೩
ಪ್ರತ್ಯಯಸರ್ಗ ೨೮
ಪ್ರಧಾನ ೩
ಪ್ರಮಾಣ ೩೨
ಪ್ರಾಣ ೧೯
ಬಂಧ ೩೦
ಬುದ್ಧಿ ೪
ಭೂತಸರ್ಗ ೨೯
ಭೂತಾದಿ ೨೦
ಮನಸ್ಸು ೮
ಮಹಾಭೂತ ೯
ಮಹಾಮೋಹ ೨೧
ಮೂಲಿಕಾರ್ಥ ೨೭
ಮೋಕ್ಷ ೩೧
ಮೋಹ ೨೧
ರಜಸ್ಸು ೧೨
ಲಿಂಗ ೩೨
ವಾಯು ೧೯
ವಿಕೃತಿ ೬
ವಿವಿದಿಷೆ ೧೮
ವೈಕಾರಿಕ ೨೦
ಶಬ್ದಪ್ರಮಾಣ ೩೨
ಶ್ರದ್ಧೆ ೧೮
ಷಷ್ಟಿತಂತ್ರ ೨೮
ಸಂಚರ ೧೩
ಸತ್ತ್ವ ೧೨
ಸಿದ್ಧಿ ೨೫
ಸುಖೇಚ್ಛೆ ೧೮

# ವಿಚಾರಕರಿಗೆ ಕೆಲವು ಪ್ರಶ್ನೆಗಳು

(೧) "ತತ್ತ್ವಗಳ ಸ್ವರೂಪವನ್ನು ಅರಿತುಕೊಳ್ಳುವದು ದುಃಖನಿವೃತ್ತಿಗೆ" ಎಂದು ಸಾಂಖ್ಯರ ಅಭಿಪ್ರಾಯವಿದೆಯಷ್ಟೆ ; ದುಃಖದ ವಿಷಯದಲ್ಲಿ ಸಾಂಖ್ಯರ ಮತವು ಹೇಗಿರುವದೆಂದು ಇದರಿಂದ ವ್ಯಕ್ತವಾಗುವದು ?

(೨) ಸಾಂಖ್ಯರು ಹೇಳುವ ಇಪ್ಪತ್ತೈದು ತತ್ತ್ವಗಳು ಯಾವವು ? ಇವುಗಳ ಸಂಖ್ಯೆಯನ್ನು ಕಡಿಮೆಮಾಡಬಹುದಾಗಿತ್ತೆಂದು ನಿಮಗೆ ತೋರುವ ದೇನು ? ಅದು ಹೇಗೆ ?

(೩) ಮೂಲಪ್ರಕೃತಿಯ ಮೂರು ಗುಣಗಳು ಯಾವವು ? ಪ್ರಕೃತಿಗೂ ಗುಣಗಳಿಗೂ ಸಂಬಂಧವೇನು ? 'ಗುಣ'ವೆಂಬ ಹೆಸರು ಇವಕ್ಕೆ ಎಷ್ಟರ ಮಟ್ಟಿಗೆ ಒಪ್ಪುವದು ?

(೪) ಅಧ್ಯಾತ್ಮ, ಅಧಿಭೂತ, ಅಧಿದೈವ– ಎಂಬ ಪ್ರಪಂಚವಿಭಾಗವು ನಿಮಗೆ ಸರಿಯೆಂದು ತೋರುವದೆ ? ಏಕೆ ?

(೫) ಸಂಚರಪ್ರತಿಸಂಚರಗಳ ಕ್ರಮವನ್ನು ವಿವರಿಸಿ. ಇವುಗಳುಂಟಾಗುವದಕ್ಕೆ ಸರಿಯಾದ ಕಾರಣವನ್ನು ಸಾಂಖ್ಯರು ಹೇಳಿರುವರೆಂದು ನಿಮಗೆ ತೋರುತ್ತದೆಯೆ ? ಈಗಿನ ವಿಕಾಸವಾದಕ್ಕೂ (Theory of Evolution) ಸಾಂಖ್ಯರು ಹೇಳುವ ಪರಿಣಾಮವಾದಕ್ಕೂ ಯಾವ ಮುಖ್ಯವ್ಯತ್ಯಾಸಗಳು ಕಂಡುಬರುವವು ?

(೬) ಸಾಂಖ್ಯರನ್ನು ಆಸ್ತಿಕರೆನ್ನಬೇಕೆ ? ನಾಸ್ತಿಕರೆನ್ನಬೇಕೆ ? ಕಾರಣವೇನು ?

15-7-64, 1000, ಅಧ್ಯಾತ್ಮಪ್ರಕಾಶ ಮುದ್ರಣಾಲಯ, ಹೊಳೆನರಸೀಪುರ.

# ಅಧ್ಯಾತ್ಮಪ್ರಕಾಶಕಾರ್ಯಾಲಯ,

## ಹೊಳೆನರಸೀಪುರ.

## ಈ ಕಾರ್ಯಾಲಯದಿಂದ ತಾವು ಯಾವಯಾವ ಲಾಭವನ್ನು ಪಡೆಯಬಹುದು?

೧. ಕಾರ್ಯಾಲಯದಲ್ಲಿ ನಡೆಯುತ್ತಿರುವ ಪೂಜೆ, ಭಜನೆ, ಪುರಾಣಶ್ರವಣ, ಉಪನ್ಯಾಸ, ಅನುಷ್ಠಾನಗಳು– ಇವುಗಳನ್ನು ನೋಡಿ ನಲಿಯಬಹುದು.

೨. ಕಾರ್ಯಾಲಯದಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯವಾದ ಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

೩. ಕಾರ್ಯಾಲಯದಲ್ಲಿರುವ "ವಿದ್ಯಾನಿಲಯ"ಕ್ಕೆ ನಿಮ್ಮ ಕಡೆಯಲ್ಲಿರುವ ಬ್ರಾಹ್ಮಣ ವಿದ್ಯಾರ್ಥಿಗಳನ್ನು ಕಳುಹಿಸಿ ಅಧ್ಯಾತ್ಮವಿದ್ಯೆಯಲ್ಲಿ ಪ್ರವೀಣರನ್ನಾಗಿ ಮಾಡಿಸಿ, ಅವರಿಂದ ನಿಮ್ಮ ಪ್ರಾಂತದಲ್ಲಿ ವಿದ್ಯಾಪ್ರಸಾರವನ್ನು ಮಾಡಿಸಬಹುದು.

೪. ಕಾರ್ಯಾಲಯದಲ್ಲಿ ಪ್ರಕಟವಾಗುವ "ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಗೆ ಚಂದಾದಾರರಾಗಿ ತಿಂಗಳುತಿಂಗಳೂ ಬಗೆಬಗೆಯ ಅಧ್ಯಾತ್ಮಬೋಧೆಯನ್ನು ಪಡೆಯಬಹುದು. ಮಹಾಪೋಷಕರೂ ಪೋಷಕರೂ ಆಗಿ ಪತ್ರಿಕೆಯನ್ನು ಪ್ರೋತ್ಸಾಹಿಸಬಹುದು.

೫. ಕಾರ್ಯಾಲಯದಲ್ಲಿ ಸಿದ್ಧವಾಗುತ್ತಿರುವ ಪುಸ್ತಕಗಳ ಪ್ರಕಟನೆಗೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ಮಹಾಶ್ರಯದಾತರು, ಆಶ್ರಯದಾತರು, ಮಹಾಪೋಷಕರು, ಅಥವಾ ಪೋಷಕರು ಎನಿಸಿ ಈ ಪ್ರಕಟನೆಗಳ ಪುಸ್ತಕಭಂಡಾರವೊಂದನ್ನು ಏರ್ಪಡಿಸಿಕೊಳ್ಳಬಹುದು.

೬. ಗ್ರಂಥಗಳ ಪ್ರಚಾರಕ್ಕಾಗಿ ಏರ್ಪಡಿಸಿರುವ (1) ಬ್ರಹ್ಮವಿದ್ಯಾದಾನ (2) ಅಧ್ಯಾತ್ಮಗ್ರಂಥಪಾರಿತೋಷಿಕ (3) ವಿಶೇಷವಿನಿಯೋಗ– ಈ ಯೋಜನೆಗಳಲ್ಲಿ ಭಾಗವನ್ನು ವಹಿಸಿ ಪುಣ್ಯವನ್ನೂ ಪುರುಷಾರ್ಥವನ್ನೂ ಸಂಪಾದಿಸಬಹುದು.

೭. ಕಾರ್ಯಾಲಯದ ಕಟ್ಟಡಕ್ಕೂ ವಿದ್ಯಾರ್ಥಿನಿಲಯಕ್ಕೂ ಪೂಜಾಮಂದಿರಕ್ಕೂ ಯಥೋಚಿತವಾಗಿ ಸಹಾಯವನ್ನು ಮಾಡಿ ಪುಣ್ಯವನ್ನು ಸಂಪಾದಿಸಿಕೊಳ್ಳಬಹುದು.